# ಅನಂತಪಥ

ANANTHKUMAR PRATISHTHANA



ದೇಗುಲದರ್ಶನ ಮಾಲಿಕೆ - 26

ಪುಟ 2 ಚಿಕ್ಕಮಗಳೂರು ಜಿಲ್ಲೆಯ ಹಲವು ದೇವಾಲಯಗಳು

ಸಂಪುಟ - 4 ಅಕ್ಟೋಬರ್ - 2023 ಸಂಚಿಕೆ - 40

## " ಅನಂತಕುಮಾರರ ಕರ್ತವ್ಯನಿಷ್ಠೆ ಎಲ್ಲರಿಗೆ ಪ್ರೇರಣೆ ನೀಡಲಿ "

- ಥಾವರ್ ಚಂದ್ ಗೆಹಲೋಟ್, ರಾಜ್ಯಪಾಲರು






ಅನಂತಕುಮಾರರಿಗೆ ಕರ್ತವ್ಯನಿಷ್ಠೆಯೇ ಪ್ರಧಾನವಾಗಿತ್ತು. ಆದ್ದರಿಂದ, ಅವರ ವಿಚಾರ-ಭಾವ-ವರ್ತನೆಗಳು ಪ್ರೇರಣಾತ್ಮಕವಾಗಿದ್ದವು ಎಂದು ರಾಜ್ಯಪಾಲ ಶ್ರೀ ಥಾವರ್ ಚಂದ್ ಗೆಹಲೋಟ್ ಅನಂತ ನಮನ ಕಾರ್ಯಕ್ರಮದಲ್ಲಿ ಭಾಗವಹಿಸುತ್ತ ಹೇಳಿದರು.

ಅನಂತಕುಮಾರರ 64ನೇ ಜನ್ಮದಿನ ಸಂದರ್ಭದಲ್ಲಿ ಅದಮ್ಯ ಚೇತನ ಸಂಸ್ಥೆ ಹಾಗೂ ಅನಂತಕುಮಾರ್ ಪ್ರತಿಷ್ಠಾನವು ಸಂಯುಕ್ತವಾಗಿ 2023ರ ಸೆ. 22 ಹಾಗೂ 23ರಂದು ಎರಡು ದಿನಗಳ ಕಾಲ ಬೆಂಗಳೂರಿನ ಗವಿಪುರದ ಶ್ರೀ ಮಗಜಿ ಧೊಂಡುಸಾ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸಮಾರಂಭವನ್ನು ಉದ್ಘಾಟಿಸಿದ ರಾಜ್ಯಪಾಲರು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಹಾಗೂ ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದಿಂದ ಮಾನ್ಯತೆ ಪಡೆದ 'ಅನಂತ ಚೇತನ' (ಭಾರತೀಯ ಜ್ಞಾನ ಪ್ರಶಿಕ್ಷಣ ಕೇಂದ್ರ) ಸಂಸ್ಥೆಗೆ ಚಾಲನೆ ನೀಡಿದರು. ಅನಂತಕುಮಾರರಿಗೆ ಕೇಂದ್ರದಲ್ಲಿ ಮಂತ್ರಿಯಾಗಿ, ಮಧ್ಯಪ್ರದೇಶದ ಪ್ರಭಾರಿಯಾಗಿ, ಕರ್ನಾಟಕದ ಅಧ್ಯಕ್ಷರಾಗಿ; ಹೀಗೆ ಯಾವುದೇ ಜವಾಬ್ದಾರಿಯನ್ನು ಹೊರಿಸಿದರೂ ಅವುಗಳನ್ನು ಒಂದೇ ರೀತಿಯ ನಿಷ್ಠೆಯಿಂದ ಸಮರ್ಥವಾಗಿ ನಿರ್ವಹಿಸುತ್ತಿದ್ದರು. ನಾನು ಅವರ ಕಾರ್ಯಗಳನ್ನು ಸಮೀಪದಿಂದ ನೋಡಿದ್ದೇನೆ, ತಿಳಿದುಕೊಂಡಿದ್ದೇನೆ. ಮಧ್ಯಪ್ರದೇಶದಲ್ಲೂ ಅವರು ಭಾರತೀಯ ಜನತಾ ಪಕ್ಷದ ಪ್ರಭಾವಿ ನಾಯಕರಾಗಿಯೇ ಕೆಲಸ ಮಾಡುತ್ತಿದ್ದರು. ಹೀಗಾಗಿ, ಅವರ ಕಾಯಕ ನಿಷ್ಠೆಯು ಎಲ್ಲರಿಗೂ ಮಾದರಿಯಾಗಿದೆ ಎಂದು ಪ್ರಶಂಸಿಸಿದರು. ಭಗವಾನ್ ಬಸವೇಶ್ವರರ 'ಕಾಯಕವೇ ಕೈಲಾಸ' ಮತ್ತು, ಪಂಡಿತ ದೀನ ದಯಾಳ ಉಪಾಧ್ಯಾಯರ 'ಅಂತ್ಯೋದಯ' ತತ್ತ್ವಗಳಲ್ಲಿ ವಿಶ್ವಾಸವಿಟ್ಟಿದ್ದ ಅವರು ತಮ್ಮ ಜೀವನದ ಕೊನೆಯ ಉಸಿರಿನ ವರೆಗೂ ಕರ್ತವ್ಯವನ್ನು ಸಕ್ರಿಯವಾಗಿ ನಿಭಾಯಿಸಿದ್ದರು. ಇದು ನಮಗೆ ಪ್ರೇರಣೆಯಾಗಬೇಕಿದೆ. ಅದಮ್ಯ ಚೇತನ ಸಂಸ್ಥೆಯ ಜನಸೇವೆಯನ್ನು ಬೆಂಬಲಿಸಬೇಕಿದೆ ಎಂದೂ ರಾಜ್ಯಪಾಲರು ಹೇಳಿದರು.

'ಅನಂತನಮನ-64' ಸಮಾರಂಭದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸೆಪ್ಟೆಂಬರ್ 22ರಂದು ಪ್ರಾರಂಭವಾದ 'ಹಿಮಾಲಯ ದೃಶ್ಯವೈಭವ' (ಕೈಲಾಸ ಮಾನಸ ಸರೋವರ ಯಾತ್ರೆಯ

ಪುಟ 4 ರಲ್ಲಿ ಮುಂದುವರೆದಿದೆ











**ಬೆಂಗಳೂರಿನ ಲಲಿತ್ ಅಶೋಕ್ ಹೋಟೆಲಿನಲ್ಲಿ 2023ರ ಅ.13 ರಂದು ಜರುಗಿದ ಸಮಾರಂಭದಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು 'ಕನ್ನಡ ಪ್ರಭ ಹಾಗೂ ಏಷ್ಯಾನೆಟ್ ಸುವರ್ಣ ನ್ಯೂಸ್ ವಾಹಿನಿ' ಕೊಡಮಾಡುವ 'ಕರುನಾಡಿನ ಅಸಾಮಾನ್ಯ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಿದರು.**

ವರದಿ ಪುಟ 10ರಲ್ಲಿ

# ಚಿಕ್ಕಮಗಳೂರು ಜಿಲ್ಲೆಯ ಹಲವು ದೇವಾಲಯಗಳು

ದೇಗುಲದರ್ಶನ ಮಾಲಿಕೆ - 26







ಈ ತಿಂಗಳ ದೇಗುಲ ದರ್ಶನ ಮಾಲಿಕೆಯ ಕಾರ್ಯಕ್ರಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮತ್ತು ಸುತ್ತಲಿನ ಹಲವು ದೇವಾಲಯಗಳನ್ನು ಪರಿಚಯ ಮಾಡಿಕೊಳ್ಳೋಣ.

ಚಿಕ್ಕಮಗಳೂರು ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ಹರಿಹರಪುರವೂ ಒಂದು. ತುಂಗಾ ನದೀತೀರದಲ್ಲಿರುವ ಹರಿಹರಪುರ ಕ್ಷೇತ್ರದಲ್ಲಿ ಅಗಸ್ತ್ಯಮುನಿಗಳು ತಪಸ್ಸುಮಾಡಿ ಲಕ್ಷ್ಮೀನರಸಿಂಹದೇವರ ಅನುಗ್ರಹ ಪಡೆದರೆಂಬ ಪೌರಾಣಿಕ ಕಥೆಯಿದೆ. ಶ್ರೀ ಶಂಕರಾಚಾರ್ಯರಿಂದ ಮೊದಲುಗೊಂಡ ಅವಿಚ್ಛಿನ್ನ ಗುರುಪರಂಪರೆ ಈ ಕ್ಷೇತ್ರವನ್ನು ಪಾವನಗೊಳಿಸಿದೆ. ಈ ಪರಂಪರೆಯಲ್ಲಿ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿಯವರು ಇಲ್ಲಿಯ ಮಠದ ಧಾರ್ಮಿಕ ಚಟುವಟಿಕೆಗಳ ನೇತೃತ್ವ ವಹಿಸಿದ್ದಾರೆ. ವಿಜಯನಗರದ ಅರಸ ಹರಿಹರನು ಇಲ್ಲಿ 14 ನೇ ಶತಮಾನದಲ್ಲಿ ಅಗ್ರಹಾರವನ್ನು ನಿರ್ಮಿಸಿದನೆಂದು ಶಾಸನದ ಉಲ್ಲೇಖವಿದೆ. ಇಲ್ಲಿಯ ದೇಗುಲದಲ್ಲಿ ಲಕ್ಷ್ಮೀನರಸಿಂಹಸ್ವಾಮಿಯ ಭವ್ಯವಾದ ಮೂರ್ತಿಯಿದೆ. ಅಲ್ಲದೆ ಶ್ರೀ ಶಂಕರಾಚಾರ್ಯರು ಪ್ರತಿಷ್ಠಾಪಿಸಿದರೆನ್ನಲಾದ ಶ್ರೀ ಶಾರದಾ ಪರಮೇಶ್ವರಿಯ ದರ್ಶನವನ್ನೂ ಪಡೆಯಬಹುದು. ಇದೇ ಕ್ಷೇತ್ರದಲ್ಲಿ ಸೋಮೇಶ್ವರ, ವೆಂಕಟರಮಣ ಮೊದಲಾದ ದೇವಾಲಯಗಳೂ ಇವೆ.

ಹರಿಹರಪುರದಿಂದ ಆರು ಕಿಮೀ ದೂರದಲ್ಲಿರುವ ನಾರ್ವೆ ಗ್ರಾಮದಲ್ಲಿ ಚಂಡಿಕೇಶ್ವರಿ ಮತ್ತು ಗಂಗಾ ವಿಶ್ವೇಶ್ವರ ದೇವಾಲಯಗಳಿವೆ. ಗ್ರಾಮದ ಮತ್ತೊಂದು ದಿಕ್ಕಿನಲ್ಲಿ ಎತ್ತರದ ದಿಬ್ಬದ ಮೇಲಿರುವ ಶ್ರೀಕೃಷ್ಣ ದೇವಾಲಯ ಮತ್ತು ಸುತ್ತಲಿನ ಪ್ರಕೃತಿದೃಶ್ಯ ರಮಣೀಯವಾಗಿದೆ.

ತಾಲೂಕು ಕೇಂದ್ರವಾದ ಕೊಪ್ಪದಲ್ಲಿ ವೀರಭದ್ರ ದೇವಾಲಯವಿದೆ. ಇಲ್ಲೇ ಸಮೀಪದಲ್ಲಿರುವ ಕಮಂಡಲ ಗಣಪತಿಯ ಗುಡಿಯು ದರ್ಶನೀಯ ಸ್ಥಳವಾಗಿದೆ. ಬ್ರಾಹ್ಮೀನದಿಯ ಉಗಮಸ್ಥಾನವು ಇಲ್ಲಿದ್ದು ಗಣಪತಿಯ ಗುಡಿಯ ಎದುರಿನ ಹೊಂಡದಲ್ಲಿ ಸದಾ ನೀರು ಹರಿಯುತ್ತಿರುತ್ತದೆ.

ಕೊಪ್ಪದಿಂದ 12 ಕಿಮೀ ದೂರದ ಬಂಡಿಗಡಿ ಗ್ರಾಮಕ್ಕೆ ಶಕಟಪುರವೆಂಬ ಸಂಸ್ಕೃತದ ಹೆಸರೂ ಇದೆ. ಇಲ್ಲಿರುವ ಮಠವು ಪುರಾತನವಾಗಿದ್ದು 14ನೇ ಶತಮಾನದಲ್ಲೇ ಮಠಕ್ಕೆ ದತ್ತಿ ನೀಡಲಾದ ವಿವರವಿರುವ ಶಾಸನಗಳಿವೆ. ಮಠದ ಆವರಣ, ಇತ್ತೀಚೆಗೆ ಪುನರ್ನಿರ್ಮಿಸಲಾಗಿರುವ ಗೋಪಾಲಕೃಷ್ಣ ದೇಗುಲ, ಗೋಪುರ, ಗುಡಿಯ ಸಂಕೀರ್ಣದಲ್ಲಿರುವ ಶಿಲ್ಪಗಳು ಆಕರ್ಷಕವಾಗಿವೆ.

ಕೊಪ್ಪದ ಸಮೀಪದಲ್ಲಿರುವ ಇನ್ನೊಂದು ಗ್ರಾಮ ಜಮ್ಮಟಿಗೆ. ಇಲ್ಲಿರುವ ನೀಲಕಂಠೇಶ್ವರ ದೇವಾಲಯವನ್ನು 1733ರಲ್ಲಿ ಮೂಡಿಗೆರೆಯ ಕಾಳಣ್ಣನೆಂಬಾತನು ನಿರ್ಮಿಸಿದನಂತೆ. ದೇವಾಲಯ ಚಿಕ್ಕದಾದರೂ ಅದರ ಹೊರಗೋಡೆಗಳ ಮೇಲಿನ ಕಿರುಶಿಲ್ಪಗಳು ಗಮನಸೆಳೆಯುತ್ತವೆ. ರಾಮಾಯಣ, ಮಹಾಭಾರತ, ಭಾಗವತದ ದೃಶ್ಯಗಳಲ್ಲದೇ ಸ್ವರ್ಗನರಕಾದಿಗಳ ಚಿತ್ರಣವೂ ಇಲ್ಲಿ ಕಂಡುಬರುತ್ತದೆ.

ಶೃಂಗೇರಿ- ನಾಡಿನ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲೊಂದು. ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠವು ಇಲ್ಲಿನ ಪಾವಿತ್ರ್ಯವನ್ನು ಮಿಗಿಲುಗೊಳಿಸಿದೆ. ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದ ಪ್ರಾರಂಭದಲ್ಲೇ ಹರಿಹರರಾಜನು ಇಲ್ಲಿಗೆ ಬಂದು ಗುರುಗಳ ದರ್ಶನ ಪಡೆದು ದತ್ತಿಗಳನ್ನು ನೀಡಿದ ಶಾಸನಗಳಿವೆ. ಇಲ್ಲಿನ ವಿದ್ಯಾಶಂಕರ ದೇವಾಲಯವನ್ನು ವಿಜಯನಗರದ ಕಾಲದಲ್ಲಿ 1357ರಲ್ಲಿ ನಿರ್ಮಿಸಲಾಯಿತು. ಶಾರದಾಮಾತೆಯ ದೇಗುಲವನ್ನು 1910ರಲ್ಲಿ ಮೈಸೂರು ಅರಸರ ಶಿಲ್ಪಿಗಳು ಪುನರ್ನಿರ್ಮಾಣ ಮಾಡಿದರು. ಶೃಂಗೇರಿಯ ಇನ್ನೊಂದು ಪ್ರಸಿದ್ಧ ದೇವಾಲಯ ಮಲ್ಲಿಕಾರ್ಜುನ ಅಥವಾ ಮಲಹಾನಿಕರೇಶ್ವರನೆಂಬ ಶಿವನ ದೇಗುಲ.

ಶೃಂಗೇರಿಯಿಂದ 11 ಕಿಮೀ ದೂರದಲ್ಲಿರುವ ಋಷ್ಯಶೃಂಗಪುರವು ಕಿಗ್ಗ ಎಂಬ ಹೆಸರಿನಿಂದಲೂ ಪರಿಚಿತ. ಇಲ್ಲಿರುವ ಪುರಾತನ ಶಿವಲಿಂಗವು ಋಷ್ಯಶೃಂಗೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಋಷ್ಯಶೃಂಗ ಮಹರ್ಷಿಯ ಪತ್ನಿ ಶಾಂತಾದೇವಿಯ ಗುಡಿಯೂ ಇಲ್ಲಿದೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**
LINK- http://YouTube.com/AnanthkumarPratishthana











# ಅನಂತಯಾನ

# ಹೃದಯಕ್ಕೆ ಹತ್ತಿರವಾದ ಗೀತೆ

ನಿರೂಪಣೆ : ಟಿ.ಎಸ್. ಗೋಪಾಲ್ ಅಧ್ಯಾಯ- 16



ಗಿರಿಜಾ ಶಾಸ್ತ್ರಿಯವರು ಅತ್ಯಂತ ಧೈರ್ಯವಂತೆ, ಚಲವಾದಿ. ಅವರಲ್ಲಿ ಎಲ್ಲಕ್ಕಿಂತ ಮಿಗಿಲಾಗಿದ್ದುದು ಅಪ್ರತಿಮ ದೇಶ ಭಕ್ತಿ ಹಾಗೂ ನಮ್ಮ ಹಿಂದೂ ಆಚಾರ-ವಿಚಾರಗಳಲ್ಲಿನ ಅತೀವ ಶ್ರದ್ಧೆ. ಇವನ್ನೆಲ್ಲ ಯಾವುದೋ ವಿಶಿಷ್ಟ ಗುಣಗಳಾಗಿ ಬೆಳೆಸಿಕೊಳ್ಳದೆ, ಗಿರಿಜಾ ಶಾಸ್ತ್ರಿಯವರು ಎಲ್ಲವನ್ನೂ ತನ್ನ ಜೀವನದ ಅವಿಭಾಜ್ಯ ಅಂಗವಾಗಿ ಮಾಡಿಕೊಂಡಿದ್ದರು. ತನ್ನ ಮಗ ಅನಂತಕುಮಾರನೂ ಇವನ್ನೆಲ್ಲ ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು, ಬಹಳ ಉನ್ನತೋನ್ನತ ಸ್ಥಾನಕ್ಕೆ ತಲುಪಬೇಕೆಂದು ಅವರು ಸದಾ ಚಿಂತನೆ ಮಾಡುತ್ತಿದ್ದವರು.

ಅಂತೆಯೇ ತಮ್ಮ ಪತಿ ನಾರಾಯಣ ಶಾಸ್ತ್ರಿಯವರ ನಡೆನುಡಿ, ಅವರ ಧಾರ್ಮಿಕ ಸ್ವಭಾವ, ಶ್ರದ್ಧೆ, ಭಕ್ತಿ ಮತ್ತು ಪುಸ್ತಕ ವ್ಯಾಸಂಗದಲ್ಲಿನ ಆಸಕ್ತಿ ಮೊದಲಾದವನ್ನೂ ತಮ್ಮ ಮಕ್ಕಳು ಅನುಸರಿಸಬೇಕೆಂದು ಅವರು ಆಶಿಸುತ್ತಿದ್ದರು. ಶಾಸ್ತ್ರಿಯವರ ತಂದೆಯವರ ಅಪಾರವಾದ ಜ್ಞಾನ, ಮೈಸೂರು ಮಹಾರಾಜರ ಮನೆಯವರ ಒಡನಾಟವೂ ಸೇರಿದಂತೆ ಅವರ ಮನೆಗೆ ಬರುತ್ತಿದ್ದ ಸಮಾಜದ ಗಣ್ಯ ವ್ಯಕ್ತಿಗಳ ಸಂಪರ್ಕ ಎಲ್ಲವನ್ನೂ ನಿಕಟವಾಗಿ ಗಮನಿಸಿದ್ದ ಗಿರಿಜಾ ಶಾಸ್ತ್ರಿಯವರಿಗೂ ನಾರಾಯಣ ಶಾಸ್ತ್ರಿಯವರಿಗೂ ತಮ್ಮ ಮಕ್ಕಳು ಪೂರ್ವಿಕರ ಎಲ್ಲ ವಿಶೇಷ ಗುಣಗಳನ್ನು ಸಂಗತಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಅತೀವ ಇಚ್ಛೆ ಇದ್ದುದು ಸಹಜವೇ.

ಗಿರಿಜಾರವರು ಪ್ರತಿ ವಾರಕ್ಕೊಮ್ಮೆ ಮಕ್ಕಳಿಗೆ ಎಣ್ಣೆ ಸ್ನಾನ ತಪ್ಪಿಸದೇ ಮಾಡಿಸುತ್ತಿದ್ದರು. ಗಂಡ ಹೆಂಡತಿ ಇಬ್ಬರೂ ಸೇರಿ ಬೆಳಗ್ಗೆ ಹಂಡೆಯಲ್ಲಿ ನೀರು ಕಾಯಿಸುವ ಕೆಲಸಕ್ಕೆ ತೊಡಗುತ್ತಿದ್ದರು. ಇತ್ತೀಚೆಗೆ ಮದುವೆ ಸಮಾರಂಭಗಳಲ್ಲಿ ಮಾತ್ರ ಉಳಿದುಕೊಂಡಿರುವ ಎಣ್ಣೆ ಶಾಸ್ತ್ರ ಮಾಡಿಸುತ್ತಿದ್ದರು. ಆ ಶಾಸ್ತ್ರದ ವೇಳೆಗೆ ಯಾವಾಗಲೂ ಒಂದು ಹಾಡನ್ನು ಹೇಳುತ್ತಲಿದ್ದರು: "ಎಣ್ಣೆಯನು ಒತ್ತುತ್ತ ಯದುಕುಲತಿಲಕನಿಗೆ, ವೇಣುಗೋಪಾಲನಿಗೆ ಹರಸುತ್ತ, ಆಯುಷ್ಯ ವಂತನಾಗು ಭಾಗ್ಯವಂತನಾಗು, ರಾಜ್ಯವನ್ನಾಳುವ ದೊರೆಯಾಗು" ಈ ಹಾಡನ್ನು ಯಾವಾಗಲೂ ಅನಂತಕುಮಾರನನ್ನು ಉದ್ದೇಶಿಸಿ ಹೇಳುತ್ತಿದ್ದುದು ರೂಢಿ. ಅದೇ ಚಿಕ್ಕ ಮಗ ನಂದಕುಮಾರನಿಗೆ ಹಾಡು ಹೇಳುವಾಗ "ನೀನು ಟಾಟಾ ಬಿರ್ಲಾ ಅಂತಾಗು" ಎಂದು ಹರಸುತ್ತಿದ್ದರು.

ಆದರೆ ಲೋಕದಲ್ಲಿ ಎಲ್ಲ ತಂದೆ ತಾಯಿಗಳಿಗೆ ಇರಬಹುದಾದ ಇಷ್ಟದಂತೆ ಅದು ಹಾಡಿನ ಹಾರೈಕೆಯಲ್ಲೋ ಮನಸ್ಸಿನ ಆಳದಲ್ಲೋ ಮಾತ್ರವೇ ಉಳಿಯಲಿಲ್ಲ. ಆ ಪ್ರಬಲವಾದ ಆಕಾಂಕ್ಷೆಯನ್ನು ನಿಜಜೀವನದಲ್ಲಿ ಸಾಧ್ಯ ಮಾಡುವುದಕ್ಕೆ ಬೇಕಾಗಿರುವಂತಹ ಎಲ್ಲಾ ಉಪಕ್ರಮಗಳನ್ನು ಶಾಸ್ತ್ರಿ ದಂಪತಿಯವರು ತಮ್ಮ ಮಕ್ಕಳ ಬಾಲ್ಯದಿಂದಲೇ ಜಾರಿಗೊಳಿಸಲು ಪ್ರಯತ್ನಿಸತೊಡಗಿದರು. ಅದಕ್ಕೆ ಬೇಕಾಗಿರುವ ಹೊಂದಾಣಿಕೆಗಳಿಗೆ ಅವಶ್ಯವಾದಂತೆ ತಮ್ಮ ಬದುಕಿನಲ್ಲೇ ಬದಲಾವಣೆ ಮಾಡಿಕೊಳ್ಳುತ್ತ ಎಲ್ಲ ಗುಣಗಳನ್ನು ಮಕ್ಕಳಿಗೆ ಧಾರೆಯೆರೆದರು.

ತಮ್ಮ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯ ಚೆನ್ನಾಗಿರಬೇಕೆಂದು ಗಿರಿಜಾ ಶಾಸ್ತ್ರಿ ಕಾಳಜಿವಹಿಸುತ್ತಿದ್ದರು. ಎಳೆಯ ಮಕ್ಕಳಿಗೆ ಬಹು ವಿಷಯಗಳ ತಿಳುವಳಿಕೆ ಮೂಡಿಸುವ ಬೋಧನೆಯ ವ್ಯವಸ್ಥೆಯಿರಬೇಕು, ಸ್ವಚ್ಛತೆಯಿರಬೇಕು, ಅವರಲ್ಲಿ ಧೈರ್ಯ ಇರಬೇಕು, ಆತ್ಮಸ್ಥೈರ್ಯ ಬೆಳೆಸಬೇಕು - ಎಂಬಿವೇ ಮೊದಲಾದ ಅವರ ಮಹದಾಶಯಗಳಿಗೆ ಪೋಷಕವಾಗಬಲ್ಲ ಶಾಲಾಪರಿಸರವೇ ಎಂ.ಟಿ.ಎಸ್. ಕಾಲೊನಿಯಲ್ಲಿ ಇದ್ದಿರಲಿಲ್ಲ. ಈ ಸ್ಥಿತಿಯೆದುರಾದಾಗ ಗಿರಿಜಾ ಶಾಸ್ತ್ರಿಯವರು ತಾವೇ ಒಂದು ಪೂರ್ವಪ್ರಾಥಮಿಕ ಶಾಲೆಯನ್ನು ತೆರೆಯಲು ಮುಂದಾದರು. ಮುಂದೆ ತಮ್ಮ ಮಕ್ಕಳು ಬೇರೆ ಬೇರೆ ಶಾಲೆಗಳಲ್ಲಿ ಓದುತ್ತಿದ್ದಾಗ, ನಿಯಮಿತವಾಗಿ ಶಾಲೆಗೆ ಭೇಟಿ ಕೊಟ್ಟು ಮಕ್ಕಳ ಪ್ರಗತಿಯನ್ನು ಗಮನಿಸುವುದು, ಅಲ್ಲಿಯ ಶಿಕ್ಷಕರ ಜೊತೆಗೆ ಪರಿಚಯ ಮಾಡಿಕೊಳ್ಳುವುದು ಮೊದಲಾದವುಗಳ ಬಗೆಗೆ ಆಸಕ್ತಿವಹಿಸುತ್ತಿದ್ದರು. ಮಕ್ಕಳ ಸ್ನೇಹಿತರು ಎಂತಹವರು, ಅವರ ಆಟಪಾಟಗಳ ಆಸಕ್ತಿ ಇವೆಲ್ಲವನ್ನೂ ಬಹಳಷ್ಟು ಕೂಲಂಕಷವಾಗಿ ಗಮನಿಸುತ್ತಾ ಇರುವುದು ಗಿರಿಜಾ ಶಾಸ್ತ್ರಿಯವರ ಅಭ್ಯಾಸವಾಗಿತ್ತು. ವಿಶೇಷವಾಗಿ ಭಗವದ್ಗೀತೆಯ ತತ್ವ, ಪಠಣಗಳ ಬಗ್ಗೆ ಗಿರಿಜಾ ಶಾಸ್ತ್ರಿಯವರಿಗೆ ಭಕ್ತಿ ಶ್ರದ್ಧೆಗಳು ಮೂಡಿದ್ದರಿಂದಲೇ ಅವರು ಹುಬ್ಬಳ್ಳಿಯಲ್ಲಿ ಗೀತಾ ತರಗತಿಗಳನ್ನು ಪ್ರಾರಂಭಿಸಿದರು. ಮುಂದೆ, ಹುಬ್ಬಳ್ಳಿಗೆ ಆಗಮಿಸಿದ ಸ್ವಾಮಿ ಚಿನ್ಮಯಾನಂದರ ಪ್ರೋತ್ಸಾಹವೂ ಗಿರಿಜಾರವರಲ್ಲಿ ಹುರುಪು ತುಂಬಿತು. ಹುಬ್ಬಳ್ಳಿಯಲ್ಲಿ ಚಿನ್ಮಯಾನಂದರ ಪ್ರವಚನ ಸಪ್ತಾಹದ ಕಾರ್ಯಕ್ರಮದ ಆಯೋಜಕರಲ್ಲಿ ಒಬ್ಬರಾಗಿ ಗಿರಿಜಾ ಶಾಸ್ತ್ರಿಯವರನ್ನೂ ನೇಮಿಸಲಾಗಿತ್ತು. ಚಿನ್ಮಯಾನಂದರು ವಿಶೇಷವಾಗಿ ಗಿರಿಜಾರವರ ಶ್ರದ್ಧೆ ಆಸ್ಥೆಗಳನ್ನು ಗುರುತಿಸಿ ಸನ್ಮಾನ ಮಾಡಿದ್ದು ಅವರಿಗೆ ಭಗವದ್ಗೀತೆಯ ಬಗ್ಗೆ ಆಸಕ್ತಿ ಮತ್ತಷ್ಟು ಹೆಚ್ಚಲು ಇಂಬುಕೊಟ್ಟಿತು.

ತಮ್ಮ ಮಕ್ಕಳು ಇನ್ನೂ ಏಳೆಂಟು ವರುಷದವರಿರುವಾಗಲೇ ಗಿರಿಜಾ ಶಾಸ್ತ್ರಿಯವರು ಮಕ್ಕಳಿಗೆ ಭಗವದ್ಗೀತೆ ಹೇಳಿ ಕೊಡುತ್ತಿದ್ದರು. ಮಕ್ಕಳು ಸಾಕಷ್ಟು ಬಾಯಿಪಾಠವನ್ನೂ ಕಲಿತಿದ್ದರು. ಆದರೆ ಕಂಠಪಾಠ ಮಾಡಿದರಷ್ಟೇ ಸಾಲದು, ಗೀತೆಯ ಅರ್ಥವನ್ನೂ ಮನನಮಾಡಿಕೊಳ್ಳಬೇಕು ಎನ್ನುವುದು ತಾಯಿಯ ಅಪೇಕ್ಷೆ. ಅದಕ್ಕೆಂದೇ ಕನ್ನಡದಲ್ಲಿ ಗೀತೆಯ ಶ್ಲೋಕಗಳನ್ನು ಅರ್ಥಸಹಿತ ಮುದ್ರಿಸಿರುವ ಭಗವದ್ಗೀತೆಯ ಪುಸ್ತಕವೊಂದನ್ನು ಕೊಂಡುತಂದ ಗಿರಿಜಾರವರು, ಪುಸ್ತಕದಲ್ಲಿ ಅನಂತಕುಮಾರನ ಹೆಸರನ್ನು ಬರೆದು 'ಪ್ರೀತಿಯಿಂದ ತಾಯಿ ಕೊಟ್ಟಿದ್ದು' ಎಂದು ನಮೂದಿಸಿ, ಮಗನಿಗೆ ಮೊದಲು ಆ ಪುಸ್ತಕವನ್ನು ಕೊಟ್ಟರು. ಜೊತೆಗೊಂದು ಹಿತನುಡಿಯನ್ನೂ ಹೇಳಿದರು: "ನೀನು ಪ್ರತಿದಿನ ತಪ್ಪದೇ ಐದು ಶ್ಲೋಕಗಳನ್ನು ಓದಬೇಕು. ಶ್ಲೋಕವನ್ನು ಓದಿ ಬಾಯಿಪಾಠ ಮಾಡುವುದು ಅಷ್ಟೇ ಅಲ್ಲ, ಆಯಾ ಶ್ಲೋಕದ ಅರ್ಥವನ್ನು ತಿಳಿದುಕೊಳ್ಳಬೇಕು ಮತ್ತು ಆ ಅರ್ಥವನ್ನು ನಿನ್ನ ಮುಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು." ಆಗ ಕೆಳಮಧ್ಯಮ ವರ್ಗದ ಮನೆಗಳಲ್ಲಿ ಪಠ್ಯಪುಸ್ತಕಗಳನ್ನು ಬಿಟ್ಟರೆ ಬೇರೆ ಪುಸ್ತಕಗಳು ಇರುವುದು ಕಡಿಮೆ. ಅಂತಹ ಸಂದರ್ಭದಲ್ಲಿ ಎಂಟು ವರ್ಷದ ಮಗುವಿಗೆ ಗೀತೆಯ ಪುಸ್ತಕ ತಂದುಕೊಟ್ಟುದಲ್ಲದೆ, ಅವನು ಪ್ರತಿ ದಿನ ಓದುವ ರೀತಿಯಲ್ಲಿ ಪ್ರೇರಿಸಿದ ರೀತಿ ಬಹಳ ವಿಶೇಷವಾಗಿತ್ತು. ತನ್ನ ಇನ್ನಿಬ್ಬರು ಮಕ್ಕಳನ್ನೂ ಗಿರಿಜಾ ಶಾಸ್ತ್ರಿಯವರು ಹೀಗೆಯೇ ಗೀತೆ ಕಲಿಯುವಂತೆ ಪ್ರೋತ್ಸಾಹಿಸಿದರು.

ತಾಯಿಯ ಹಿತವಚನದಂತೆ ತನ್ನ ಎಂಟನೆಯ ವಯಸ್ಸಿನಲ್ಲಿ ಭಗವದ್ಗೀತೆಯನ್ನು ಓದುವುದಕ್ಕೆ ಪ್ರಾರಂಭ ಮಾಡಿದ ಅನಂತಕುಮಾರ್, ತನ್ನ ಜೀವಮಾನದುದ್ದಕ್ಕೂ ಗೀತಾಪಠಣವನ್ನು ಒಂದು ದಿನವೂ ತಪ್ಪಿಸದೇ ಮುಂದುವರಿಸಿಕೊಂಡು ಹೋದರೆನ್ನುವುದು ಇದಕ್ಕೂ ಮಿಗಿಲಾದ ವಿಶೇಷವೇ ಸರಿ.

ಭಗವದ್ಗೀತೆಗೆ ಸಂಬಂಧಿಸಿದಂತೆ ಗಿರಿಜಾ ಶಾಸ್ತ್ರಿಯವರು ಇನ್ನೊಂದು ಅಭ್ಯಾಸವನ್ನು ಸಂಪ್ರದಾಯದಂತೆ ಅನುಸರಿಸಿಕೊಂಡು ಬಂದದ್ದು ಗಮನಾರ್ಹವಾಗಿದೆ. ಹೊಸ ವರ್ಷದ ಪ್ರಾರಂಭವಾದ ಯುಗಾದಿಯ ದಿನ, ಮನೆಯ ಪ್ರತಿಯೊಬ್ಬರೂ ಆ ಭಗವದ್ಗೀತೆಯ ಪುಸ್ತಕವನ್ನು ಇಟ್ಟುಕೊಂಡು ಪುಸ್ತಕದೊಳಗಿಂದ ಯಾವುದಾದರೂ ಒಂದು ಪುಟ ತೆಗೆಯಬೇಕು. ಆ ಪುಟದಲ್ಲಿ ತಮ್ಮ ಕಣ್ಣಿಗೆ ಬಿದ್ದ ಶ್ಲೋಕವನ್ನೂ ಅದರ ಅರ್ಥವನ್ನೂ ಓದಬೇಕು. ಆ ಶ್ಲೋಕ ಮತ್ತದರ ಅರ್ಥವನ್ನು ಆ ಹೊಸ ವರ್ಷದ ತಮ್ಮ ಒಂದು ಸಂಕಲ್ಪವೋ ಎನ್ನುವ ರೀತಿಯಲ್ಲಿ ಅದನ್ನು ತಮ್ಮ ದಿನಚರ್ಯೆಯಲ್ಲಿ ಅಳವಡಿಸಿಕೊಳ್ಳಬೇಕು. ತಾಯ್ತಂದೆಯರು ಹೇಳಿಕೊಟ್ಟ ಈ ಪದ್ಧತಿಯನ್ನು ಅನಂತಕುಮಾರ್ ತಮ್ಮ ಬದುಕಿನುದ್ದಕ್ಕೂ ವ್ರತದಂತೆ ಆಚರಿಸಿಕೊಳ್ಳತೊಡಗಿದರು.

ಗಿರಿಜಾ ಶಾಸ್ತ್ರಿಯವರು ತಮ್ಮ ಮಕ್ಕಳ ಪೂರ್ವಪ್ರಾಥಮಿಕ ಶಿಕ್ಷಣಕ್ಕೆ ಅನುಕೂಲವಾಗಲೆಂದು ತೆರೆದ ಬಾಲವಾಡಿ 'ಆಂಟಿ ಸ್ಕೂಲು', ಇಡೀ ಕಾಲೊನಿಯ ಮಕ್ಕಳೆಲ್ಲರ ಅನುಕೂಲಕ್ಕೆ ಒದಗಿ ಬಂದ ಬಗೆಯನ್ನು ಹಿಂದೆಯೇ ಹೇಳಿದೆ. ಅನಂತಕುಮಾರನೂ ಅವನ ತಮ್ಮತಂಗಿಯರೂ ಆಂಟಿ ಸ್ಕೂಲನ್ನು ತೊರೆದು ಬೇರೆಯ ಶಾಲೆಗೆ ಹೋದಮೇಲೂ ಅನೇಕ ವರುಷಗಳ ಕಾಲ ಈ ಶಾಲೆ ನಡೆದಿತ್ತು. ಗಿರಿಜಾರವರ ಮಕ್ಕಳು ದೊಡ್ಡವರಾಗಿ ತಾವೇ ಆಂಟಿ ಸ್ಕೂಲಿನ ಶಿಕ್ಷಕರಾಗಿ ಕೆಲಸಮಾಡಿದ್ದೂ ಆಯಿತು.

ಭಗವದ್ಗೀತೆ ಮತ್ತು ಬದುಕಿನಲ್ಲಿ ಅನುಸರಿಸಬೇಕಾದ ಆಚಾರವಿಚಾರಗಳಿಗೆ ಸಂಬಂಧಿಸಿದಂತೆ ತಮ್ಮ ಮಕ್ಕಳಿಗೆ ತಾವು ಮನೆಯಲ್ಲಿ ಹೇಳಿಕೊಡುತ್ತಿದ್ದ ವಿಷಯಗಳನ್ನೇ ವ್ಯವಸ್ಥಿತವಾದ ತರಗತಿಯ ರೂಪದಲ್ಲಿ (ಪುಟ 4 ರಲ್ಲಿ ಮುಂದುವರೆದಿದೆ)

ಪುಟ 1 ರಿಂದ


## " ಅನಂತಕುಮಾರರ ಕರ್ತವ್ಯನಿಷ್ಠೆ ಎಲ್ಲರಿಗೆ ಪ್ರೇರಣೆ ನೀಡಲಿ "



ಅಪೂರ್ವ ಛಾಯಾಚಿತ್ರಗಳ ಸಂಗ್ರಹ), 'ಹೊಯ್ಸಳ ಶಿಲ್ಪದರ್ಶನ'(ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಹೆಮ್ಮೆಯ ಪ್ರತೀಕ ಹಾಗೂ ಉತ್ಕೃಷ್ಟ ಕಲಾ ಪ್ರೌಢಿಮೆಗೆ ಸಾಕ್ಷಿಯಾಗಿರುವ ಹೊಯ್ಸಳ ದೇಗುಲಗಳ ಛಾಯಾಚಿತ್ರಗಳ ಸಂಗ್ರಹ) ಮತ್ತು ಶ್ರೀ ಅನಂತಕುಮಾರ್ ಅವರ ಬಾಲ್ಯ, ಶಿಕ್ಷಣ, ರಾಜಕೀಯ ಸಾಧನೆ, ಸಾಮಾಜಿಕ ಕಳಕಳಿ, ಸಂಘಟನಾ ಚಾತುರ್ಯ ಇತ್ಯಾದಿ ವಿಷಯವೈವಿಧ್ಯತೆಯ 'ಅನಂತ ಮಂಟಪ'ಗಳು ಜನರನ್ನು ವಿಶೇಷವಾಗಿ ಆಕರ್ಷಿಸಿದವು. ಜೊತೆಗೆ, ಅದಮ್ಯ ಚೇತನ ಸಂಸ್ಥೆಯ 404ನೇ 'ಹಸಿರು ಭಾನುವಾರ' ಕಾರ್ಯಕ್ರಮದ ಅಂಗವಾಗಿ ನಾನಾ ಜಾತಿಯ ಗಿಡಗಳ ಪ್ರದರ್ಶನ ಮತ್ತು ಬಟ್ಟೆಯ ಕೈಚೀಲಗಳು, ಮಾರ್ಜಕಗಳು, ಕಿರುಧಾನ್ಯಗಳು ಮುಂತಾದ ಹಸಿರು ಜೀವನ ಶೈಲಿಗೆ ಪೂರಕವಾದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯೂ ಇತ್ತು.

ಅನಂತಕುಮಾರ್ ಪ್ರತಿಷ್ಠಾನದ ಹೆಮ್ಮೆಯ ಪ್ರಕಟಣೆ, "ಅನಂತಪಥ" ಮಾಸ ಪತ್ರಿಕೆಯ 39ನೆಯ ಸಂಚಿಕೆಯನ್ನು ಇದೇ ಸಂದರ್ಭದಲ್ಲಿ ವಿವಿಧ ಹಿರಿಯ ನಾಯಕರು ಬಿಡುಗಡೆ ಮಾಡಿದರು. ಕರ್ನಾಟಕದ ವಿವಿಧ ದೇವಾಲಯಗಳ ಕಿರು ಮಾಹಿತಿ ನೀಡುವ 64 ಬುಕ್ ಮಾರ್ಕ್‌ಗಳನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಸೆಪ್ಟೆಂಬರ್ 23 ರಂದು ಅನಂತಕುಮಾರರ ವ್ಯಕ್ತಿತ್ವದ ಕುರಿತು ಅವರ ಆತ್ಮೀಯ ಒಡನಾಡಿಗಳು ಬರೆದ ಲೇಖನಗಳು ಮತ್ತು ನೀಡಿದ ಸಂದೇಶಗಳ ಸಂಗ್ರಹ, 'ಅನಂತನಮನ' ಪುಸ್ತಕವನ್ನು ಶ್ರೀ ಡಿ ಕೆ ಶಿವಕುಮಾರ್, ಶ್ರೀ ಬಿ ಎಸ್ ಯಡಿಯೂರಪ್ಪ ಮೊದಲಾದ ಹಿರಿಯ ಗಣ್ಯರು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಹಸಿರು ಭಾನುವಾರಗಳ ಚಿತ್ರಸಂಪುಟವನ್ನೂ ಬಿಡುಗಡೆ ಮಾಡಲಾಯಿತು. ಅದಮ್ಯಚೇತನ ಅಡುಗೆ ಮನೆಯಲ್ಲಿ ರಾಸಾಯನಿಕ ಮಾರ್ಜಕಗಳ ಬದಲು ನೈಸರ್ಗಿಕ ಮಾರ್ಜಕಗಳನ್ನು ಬಳಸುವ ಪದ್ಧತಿಗೆ ಶ್ರೀ ಡಿ ಕೆ ಶಿವಕುಮಾರ್ ಚಾಲನೆ ನೀಡಿದರು. ಎರಡೂ ದಿನಗಳ ಅವಧಿಯಲ್ಲಿ ಅದಮ್ಯಚೇತನದಿಂದ ಬಿಸಿಯೂಟ ಪೂರೈಕೆಯಾಗುವ 88 ಸರ್ಕಾರಿ ಶಾಲೆಗಳಲ್ಲಿ ಎಸ್. ಎಸ್. ಎಲ್. ಸಿ ಯಲ್ಲಿ ಉತ್ತಮ ಅಂಕಗಳನ್ನು ಪಡೆದ ಒಟ್ಟು 176 ಮಕ್ಕಳನ್ನು ಪುರಸ್ಕರಿಸಿ, ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ಸರಕಾರಿ ಶಾಲೆಗಳಲ್ಲಿ ಓದುತ್ತಿರುವ ಈ ವಿದ್ಯಾರ್ಥಿಗಳ ಸಾಧನೆ ಗಮನಾರ್ಹ. ಅದಮ್ಯ ಚೇತನ ಸಂಸ್ಥೆಯ ಮಧ್ಯಾಹ್ನದ ಬಿಸಿಯೂಟ, ಪಳಿಯುಳಿಕೆ ಇಂಧನರಹಿತ ಶೂನ್ಯತ್ಯಾಜ್ಯ ಅಡುಗೆಮನೆ, ಪ್ಲೇಟ್ ಬ್ಯಾಂಕ್, ನಿತ್ಯ ಅನ್ನದಾನ, ದೇಗುಲ ದರ್ಶನ, ಚಿಣ್ಣರ ಚೇತನ ಗೋಡೆ ಪತ್ರಿಕೆ, ಹಸಿರು ಭಾನುವಾರ, ಸೇವಾ ಉತ್ಸವ, ಪೌಷ್ಟಿಕ ಸಾತ್ವಿಕ ಆಹಾರ ಆಂದೋಲನ ಮುಂತಾದ ಅನೇಕ ಸೇವಾಕಾರ್ಯಕ್ರಮಗಳನ್ನು ವೇದಿಕೆಯಿಂದ ಪರಿಚಯಿಸಲಾಯಿತು. ಎರಡೂ ದಿನಗಳ ಅವಧಿಯಲ್ಲಿ ಹಮ್ಮಿಕೊಂಡ ಎ-ಚಾಟ್ ಕಾರ್ಯಕ್ರಮಗಳು ಪ್ರೇಕ್ಷಕರ ಮನರಂಜಿಸುವಲ್ಲಿ ಯಶಸ್ವಿಯಾದವು. ಶ್ರೀಮತಿ ಕಾವ್ಯ ಜಿ ರಾವ್ ಮತ್ತು ಸಂಗಡಿಗರಿಂದ ಭರತನಾಟ್ಯ, ಕುಮಾರಿ ನೇಹಾ ಕೂರ್ಸೆಯವರಿಂದ ಭರತನಾಟ್ಯ ಹಾಗೂ ಯೋಗನೃತ್ಯ ಬೆರಗುಗೊಳಿಸುವಂತಿದ್ದವು.

ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಉಪಮುಖ್ಯಮಂತ್ರಿ ಶ್ರೀ ಗೋವಿಂದ ಕಾರಜೋಳ, ವಿಧಾನಸಭೆಯ ಮಾಜಿ ಸಭಾಪತಿ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಶಾಸಕರಾದ ಶ್ರೀ ಸಿ.ಟಿ. ರವಿ, ಶ್ರೀ ಅರವಿಂದ ಲಿಂಬಾವಳಿ, ಶಾಸಕರಾದ ಶ್ರೀ ರವಿ ಸುಬ್ರಮಣ್ಯ, ಶ್ರೀ ಉದಯ ಗರುಡಾಚಾರ್, ಶ್ರೀ ಜನಾರ್ದನ ರೆಡ್ಡಿ, ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ. ವಿ. ಕೃಷ್ಣಭಟ್ಟ, ಬಾಹ್ಯಾಕಾಶ ವಿಜ್ಞಾನಿ ಶ್ರೀ ವಿ. ಕೆ. ಆತ್ರೆ, ಆರ್‌ಎಸ್‌ಎಸ್ ಹಿರಿಯ ಕ್ಷೇತ್ರೀಯ ಸಂಘ ಚಾಲಕ ಶ್ರೀ ವಿ. ನಾಗರಾಜ್, ಶ್ರೀ ಹೆಚ್. ಎಸ್. ನಾಗರಾಜ್, ವಿಧಾನ ಪರಿಷತ್ ಸದಸ್ಯ ಶ್ರೀ ಅ. ದೇವೇಗೌಡ, ಮಾಜಿ ಹಿರಿಯ ಪೊಲೀಸ್ ಅಧಿಕಾರಿ ಶ್ರೀ ಭಾಸ್ಕರ್ ರಾವ್ ಮೊದಲಾದ ಗಣ್ಯರು 'ಅನಂತನಮನ-64' ರ ಸಮಾರಂಭದಲ್ಲಿ ಭಾಗವಹಿಸಿದ್ದರು. ಅನಂತನಮನ-64' ಸಮಾರಂಭಕ್ಕೆ ಭೇಟಿ ನೀಡಿದ ಎಲ್ಲ ಗಣ್ಯರೂ ಅನ್ನಪೂರ್ಣ ಅಡುಗೆ ಮನೆಯನ್ನೂ ವೀಕ್ಷಣೆ ಮಾಡಿದರು.





ಪುಟ 3 ರಿಂದ

## ಹೃದಯಕ್ಕೆ ಹತ್ತಿರವಾದ ಗೀತೆ

ಕಲಿಸುವುದು ಮೇಲೆಂದು ಗಿರಿಜಾ ಶಾಸ್ತ್ರಿಯವರಿಗೆ ತೋರಿತು. ಹೀಗಾಗಿ ತಮ್ಮ ಮಕ್ಕಳೊಡನೆ ಉಳಿದ ಮಕ್ಕಳೂ ಕಲಿತು ಅನುಸರಿಸಲೆಂಬ ಉದ್ದೇಶದಿಂದ ಗಿರಿಜಾ ಶಾಸ್ತ್ರಿಯವರು ಆಂಟಿ ಸ್ಕೂಲ್ ನಡೆಯುತ್ತಿದ್ದ ಜಾಗದಲ್ಲೇ ಭಗವದ್ಗೀತೆಯ ತರಗತಿಗಳನ್ನೂ ಪ್ರಾರಂಭಿಸಿದರು. ಪ್ರತಿ ಭಾನುವಾರ ನಡೆಯುತ್ತಿದ್ದ ಈ ತರಗತಿಗೂ ಮಕ್ಕಳು ಬಂದು ಸೇರತೊಡಗಿದರು. ಅನಂತಕುಮಾರ ಮೊದಲ ತಂಡದ ವಿದ್ಯಾರ್ಥಿಯಾಗಿದ್ದನೆಂದು ಬೇರೆ ಹೇಳಬೇಕಾಗಿಲ್ಲ. ಅವನು ಪ್ರೌಢಶಾಲೆಗೆ ಸೇರುವ ಹೊತ್ತಿಗೆ ಗೀತೆಯ ತರಗತಿಗೆ ಬರುತ್ತಿದ್ದವರು ಬಹುತೇಕ ಸಣ್ಣ ವಯಸ್ಸಿನ ಹುಡುಗರಾದ್ದರಿಂದ ಅನಂತಕುಮಾರನಿಗೆ ಆ ಮಕ್ಕಳೊಡನೆ ಹೋಗಿ ಭಾನುವಾರದ ತರಗತಿಯಲ್ಲಿ ಕುಳಿತುಕೊಳ್ಳಲು ಇಷ್ಟವಾಗುತ್ತಿರಲಿಲ್ಲ. ಇದನ್ನು ಗಮನಿಸಿದ ಗಿರಿಜಾರವರು ಮಗನ ಮನಸ್ಸು ಗೀತೆಯ ಅಧ್ಯಯನದಿಂದ ವಿಮುಖವಾಗದಂತೆ ತಡೆಯಲು ಒಂದು ಸುಲಭೋಪಾಯವನ್ನು ಯೋಚಿಸಿದರು. ಅನಂತಕುಮಾರನನ್ನು ಕರೆದು "ನಿನಗೆ ಹೇಗೂ ಭಗವದ್ಗೀತೆ ಚೆನ್ನಾಗಿ ಬರುತ್ತದೆ. ನೀನು ತರಗತಿಯಲ್ಲಿ ವಿದ್ಯಾರ್ಥಿಯಾಗಿ ಕುಳಿತುಕೊಳ್ಳಬೇಕಾಗಿಲ್ಲ. ಅದರ ಬದಲು ಅಲ್ಲಿಗೆ ಬರುವ ಚಿಕ್ಕ ಮಕ್ಕಳಿಗೆ ಗೀತೆ ಹೇಳಿಕೊಡು. ನಿನಗೆ ಹೇಗೂ ಸಿನಿಮಾ ನೋಡುವುದಕ್ಕೋ ಪ್ರವಾಸ ಹೋಗುವುದಕ್ಕೋ ಹಣ ಬೇಕಾಗುತ್ತದೆಯಲ್ಲ, ಗೀತೆಯ ಬೋಧನೆಯಿಂದ ಒಂದಿಷ್ಟು ಹಣ ಸಂಪಾದನೆ ಮಾಡಬಹುದಲ್ಲವೇ?" ಎಂದರು. ಹೀಗೆ ಅನಂತಕುಮಾರನಿಗೆ ಭಗವದ್ಗೀತೆಯ ನಂಟು ಮತ್ತೂ ಒಂದು ರೂಪದಲ್ಲಿ ಮುಂದುವರಿಯಿತು.

ಪರಿಣಾಮವಾಗಿ, ಅನಂತಕುಮಾರನಿಗೆ ಭಗವದ್ಗೀತೆಯ ಹದಿನೆಂಟೂ ಅಧ್ಯಾಯಗಳ ಶ್ಲೋಕಗಳು ಕಂಠಸ್ಥವಾಗಿದ್ದವು. ಮುಂದೆ, ಎಲ್ಲೋ ಭಾಷಣ ಮಾಡುವಾಗಲಾಗಲಿ, ಹರಟೆ ಹೊಡೆಯುವಾಗಲಾಗಲಿ ಪ್ರಾಸಂಗಿಕವಾಗಿ ಅನಂತಕುಮಾರ್ ಗೀತೆಯ ಪದ್ಯಗಳನ್ನು ಬಹು ಸುಲಭವಾಗಿ ಉದ್ಧರಿಸಿ ಹೇಳಬಲ್ಲವರಾಗಿದ್ದರು. "ನೆಮ್ಮದಿಯಿಂದ ಬದುಕಬೇಕು ಎಂಬ ಅಪೇಕ್ಷೆ ಉಳ್ಳವರು ನಿತ್ಯವೂ ಭಗವದ್ಗೀತೆ ಓದಬೇಕು" ಎಂಬುದು ಅನಂತಕುಮಾರ್ ತನ್ನ ತಾಯಿಯಿಂದ ಕಲಿತು ಉಳಿದವರಿಗೂ ಸಾಮಾನ್ಯವಾಗಿ ಹೇಳುತ್ತಿದ್ದ ಮಾತು. ತಮ್ಮ ಜೀವನದುದ್ದಕ್ಕೂ ಅನಂತಕುಮಾರ್ ಭಗವದ್ಗೀತೆಯನ್ನು ತನ್ನ ಹೃದಯಕ್ಕೆ ಬಹಳ ಹತ್ತಿರವಾಗಿ ಇರಿಸಿಕೊಳ್ಳಲು ಸಾಧ್ಯವಾದುದು ಅವರ ಬಾಲ್ಯದ ಸಂಸ್ಕಾರದಿಂದಲೇ ಎಂದು ಹೇಳಬಹುದು.



**ಶ್ರೀಮತಿ ಲಕ್ಷ್ಮೀ ಅಯ್ಯಂಗಾರ್**
ನ್ಯಾಯವಾದಿ

# “ಹಲವು ಸಮಸ್ಯೆಗಳ ಪರಿಹಾರಕ್ಕೆ ಸಮಾನ ನಾಗರಿಕ ಸಂಹಿತೆಯೇ ಉತ್ತರ”

**12th Nation First Dialogue**

ಸಮಾನ ನಾಗರಿಕ ಸಂಹಿತೆಯನ್ನು ಸಂವಿಧಾನದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸಬೇಕು ಎಂಬುದು ಮೊದಲಿನಿಂದಲೂ ಇದ್ದ ಆಶಯವಾಗಿತ್ತು. 1948ರಲ್ಲಿ ನಡೆದ ಸಂವಿಧಾನ ಸಭೆಯಲ್ಲಿ ಕೆ ಎಂ ಮುನ್ಶಿ (ಹಿಂದೂ), ಮೀನೂ ಮಸಾನಿ (ಪಾರ್ಸಿ), ರಾಜ್‌ಕುಮಾರಿ ಕೌರ್ (ಕ್ರೈಸ್ತರಾಗಿ ಮತಾಂತರಗೊಂಡ ಸಿಖ್) ಮುಂತಾದ ವಿವಿಧ ಧರ್ಮೀಯರೆಲ್ಲ ನಮ್ಮ ದೇಶದಲ್ಲಿ ವಿವಿಧ ಸಮುದಾಯಗಳ ನಡುವೆ ಸಮಾನತೆಯನ್ನು ಸಾಧಿಸಲು ಸಮಾನ ನಾಗರಿಕ ಸಂಹಿತೆಯು ತೀರ ಅಗತ್ಯವೆಂಬ ವಾದದ ಪರವಾಗಿದ್ದರೆ, ಇಸ್ಮೈಲ್ ಖಾನ್ ನೇತೃತ್ವದಲ್ಲಿ ಐವರು ಮುಸ್ಲಿಂ ಸದಸ್ಯರು ಗೊಂದಲವೆಬ್ಬಿಸಿದ್ದರು. 'ತಮಗೆ ವೈಯಕ್ತಿಕ ಕಾನೂನುಗಳಿವೆ, ಅವುಗಳ ಬಗ್ಗೆ ನಮಗೇನೂ ತಕರಾರಿಲ್ಲ, ಈ ವೈಯಕ್ತಿಕ ಕಾನೂನುಗಳಿಗೆ ಯಾವುದೇ ಬದಲಾವಣೆಯ ಅಗತ್ಯವಿಲ್ಲ' ಎಂಬುದು ಮುಸ್ಲಿಂ ಸದಸ್ಯರ ವಾದವಾಗಿತ್ತು. ದೇಶವಿಭಜನೆಯಿಂದಾಗಿ ಅನೇಕ ಸಮಸ್ಯೆಗಳು ತಲೆಯೆತ್ತಿದ್ದವು. ಮುಸ್ಲಿಂ ನಾಗರಿಕರೂ ಈ ವಿಷಯದಲ್ಲಿ ಸಹಕರಿಸಲು ಸಿದ್ಧರಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ವಿವಾದಾತ್ಮಕ ವಿಷಯಗಳು ಬೇಡ ಎಂದು ನಿರ್ಧರಿಸಿದ ಶ್ರೀ ಬಿ ಆರ್ ಅಂಬೇಡ್ಕರ್, ಈ ಪ್ರಸ್ತಾಪವನ್ನು ಮೂಲಭೂತ ಹಕ್ಕುಗಳ ಬದಲಾಗಿ ನಿರ್ದೇಶಕ ಸೂತ್ರಗಳ 44ನೇ ಕಲಂ ಅಡಿಯಲ್ಲಿ ಸೇರಿಸಿದರು. ಅಂದಿನ ಸಂವಿಧಾನ ಸಭೆಯಲ್ಲಿ ಮಹಿಳೆಯರು ಇದ್ದಿದ್ದರೆ ಸನ್ನಿವೇಶವೇ ಬದಲಾಗುತ್ತಿತ್ತು. ಅದರಲ್ಲೂ ಮುಸ್ಲಿಂ ಮಹಿಳೆಯರಿದ್ದಿದ್ದರೆ ಸಮಾನ ನಾಗರಿಕ ಸಂಹಿತೆಯನ್ನು ನಿರ್ದೇಶಕ ಸೂತ್ರದ ಮೂಲೆಗೆ ತಳ್ಳುವುದು ಸಾಧ್ಯವಾಗುತ್ತಿರಲಿಲ್ಲ ಎಂಬುದು ನಿಶ್ಚಿತ.

ಇಂಡಿಯನ್ ನ್ಯಾಶನಲ್ ಕಾಂಗ್ರೆಸ್, ಜವಾಹರಲಾಲ್ ನೆಹರೂ ಮತ್ತು ಸಮಾನ ನಾಗರಿಕತೆಯನ್ನು ಇಂದು ವಿರೋಧಿಸುತ್ತಿರುವ ಕೆಲವರು ಅಂದು ಸಮಾನ ನಾಗರಿಕ ಸಂಹಿತೆಯ ಪ್ರಬಲ ಪ್ರತಿಪಾದಕರಾಗಿದ್ದರು ಎಂಬುದು ವಿಪರ್ಯಾಸ. ಸಮಾನ ನಾಗರಿಕ ಸಂಹಿತೆಯ ಅನುಪಸ್ಥಿತಿಯಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ನಿವಾರಣೆಗೆ ದೇಶದ ಸರ್ವೋಚ್ಚ ನ್ಯಾಯಾಲಯವು ಪದೇ ಪದೇ ಮಧ್ಯಪ್ರವೇಶ ಮಾಡಬೇಕಾಗುತ್ತಿದೆ. ಹೀಗಾಗಿ, ಈ ಕುರಿತ ಚರ್ಚೆ ಹಿಂದೆಂದಿಗಿಂತಲೂ ಇಂದು ಬಲವಾಗಿ ನಡೆಯುತ್ತಿದೆ.

ಸಮಾನ ನಾಗರಿಕ ಸಂಹಿತೆಯು ಯಾವುದೇ ಧರ್ಮವನ್ನು ಕುರಿತಾಗಿಲ್ಲ. ಇದು ಮತಬ್ಯಾಂಕ್ ರಾಜಕೀಯವೂ ಅಲ್ಲ. ಇದನ್ನು ಮುಸ್ಲಿಂ ವಿರೋಧಿ ಎಂದು ಬಿಂಬಿಸುವುದು ಸರಿಯಲ್ಲ. ದೇಶದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಮುಂತಾದ ಎಲ್ಲ ಧರ್ಮೀಯರಿಗೂ ಅನ್ವಯವಾಗುವ ಅನೇಕ ಕಾನೂನುಗಳಿವೆ. ಆದರೂ ಮಹಿಳೆಯರ ಹಕ್ಕುಗಳ ವಿಚಾರದಲ್ಲಿ ತಾರತಮ್ಯ ನಡೆಯುತ್ತಲೇ ಇದೆ. ದೇಶದ ಸರ್ವೋಚ್ಚ ನ್ಯಾಯಾಲಯವು ತನ್ನ ನಿರ್ಣಯಗಳ ಮೂಲಕ ಇದನ್ನು ಸರಿಪಡಿಸಲು ಪ್ರಯತ್ನಿಸುತ್ತಿದೆ. ಆದರೂ ಮದುವೆ, ವಾರಸಿಕೆ, ರಕ್ಷಕತ್ವ, ಉತ್ತರಾಧಿಕಾರ, ದತ್ತುಪ್ರಕ್ರಿಯೆ, ಮಕ್ಕಳ ಸ್ವಾಧೀನತೆ ಮುಂತಾದ ಅನೇಕ ವಿಷಯಗಳಲ್ಲಿ ಮಹಿಳೆಯರ ಹಿತಾಸಕ್ತಿಗಳನ್ನು ಕಡೆಗಣಿಸಲಾಗಿದೆ. ಇವೆಲ್ಲ ಸಮಸ್ಯೆಗಳ ಪರಿಹಾರಕ್ಕೆ ಸಮಾನ ನಾಗರಿಕ ಸಂಹಿತೆಯೊಂದೇ ಉತ್ತರ.

ಇಂದು ದೇಶವು ಅತಿದೊಡ್ಡ ಆರ್ಥಿಕತೆಯನ್ನು ಹೊಂದಿದ ದೇಶಗಳಲ್ಲಿ ಒಂದಾಗಿದೆ. ಅತಿದೊಡ್ಡ ಆರ್ಥಿಕ ಬೆಳವಣಿಗೆಯ ದರವೂ ನಮ್ಮದಾಗಿದೆ. ವಿಜ್ಞಾನ, ತಂತ್ರಜ್ಞಾನಗಳ ಕ್ಷೇತ್ರದಲ್ಲಿ ನಾವು ಅಪಾರ ಪ್ರಗತಿ ಸಾಧಿಸಿದ್ದೇವೆ. ಹೀಗಿರುವಾಗ, ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವ ಮೂಲಕ ಕಾನೂನು ಕ್ಷೇತ್ರದಲ್ಲಿಯೂ ಪ್ರಗತಿಯನ್ನು ಸಾಧಿಸಬಾರದೇಕೆ ಎಂಬುದು ನಮ್ಮೆದುರು ಇರುವ ಪ್ರಶ್ನೆ.

ಸಮಾನ ನಾಗರಿಕ ಕಾನೂನುಗಳಿಂದ ಯಾವುದೇ ಧರ್ಮದ ಪುರುಷರಿಗೆ ಅಥವಾ ಮಹಿಳೆಯರಿಗೆ ಯಾವ ರೀತಿಯಲ್ಲಿ ಅನ್ಯಾಯವಾಗುತ್ತಿದೆ ಎಂಬುದೇ ನಾವು ಪರಿಗಣಿಸಬೇಕಾಗಿರುವ ಪ್ರಶ್ನೆ. ಸೂಕ್ಷ್ಮವಾಗಿ ಗಮನಿಸಿದರೆ ಮಹಿಳೆಯರ ಹಿತಾಸಕ್ತಿಗಳನ್ನು ಕಡೆಗಣಿಸುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಹೀಗಾಗಿ ಇಂತಹ ವಿಚಾರಗಳನ್ನು ಸಮಾಜದ ಕೆಲವು ವರ್ಗಗಳೇ ಬಗೆಹರಿಸಿಕೊಳ್ಳಲಿ ಎಂದು ಬಿಟ್ಟುಬಿಡುವುದೂ ಸರಿಯಲ್ಲ.

ಸೀಮಾ ಅಶ್ವಿನಿಕುಮಾರ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ''ಎಲ್ಲ ಮದುವೆಗಳನ್ನೂ ನೋಂದಣಿ ಮಾಡಿಸುವುದು ಕಡ್ಡಾಯ'' ಎಂದು ತೀರ್ಪು ನೀಡಿದೆ. ಎಲ್ಲ ಧರ್ಮಗಳ ವಿವಾಹಗಳೂ ವಿಶೇಷ ವಿವಾಹ ಕಾಯಿದೆಯ ಅಡಿಯಲ್ಲಿ ನೋಂದಣಿ ಮಾಡುವುದರಿಂದ ಬಾಲ್ಯವಿವಾಹವನ್ನು ತಡೆಯುವುದು ಮಾತ್ರವಲ್ಲ, ಪುರುಷ ಮತ್ತು ಮಹಿಳೆಯರ ನಡುವೆ ಸಮಾನತೆಯ ಭಾವವನ್ನೂ ಉಂಟು ಮಾಡುತ್ತದೆ. ಅನೇಕ ಮಹಿಳೆಯರು ತಮ್ಮ ವಿವಾಹವನ್ನು ರುಜುವಾತು ಮಾಡಲು ಕಷ್ಟ ಪಡುವ ಪರಿಸ್ಥಿತಿ ಬದಲಾಗುತ್ತದೆ. ಜಾನ್‌ವಲ‌ರ್‌ಮಟ್ಟಂ ಪ್ರಕರಣದಲ್ಲಿ "ಕ್ರೈಸ್ತಧರ್ಮದಲ್ಲಿ ಮಹಿಳೆಯರ ಉತ್ತರಾಧಿಕಾರದ ವಿಷಯದಲ್ಲಿ ತಾರತಮ್ಯವಿದೆ" ಎಂದು ಭಾವಿಸಿದ ಸರ್ವೋಚ್ಚ ನ್ಯಾಯಾಲಯವು ನಾಗರಿಕ ಸಮಾಜದಲ್ಲಿ ಸಂವಿಧಾನದ ೪೪ನೇ ಕಲಂ ಮತ್ತು ಧಾರ್ಮಿಕ ವೈಯಕ್ತಿಕ ಕಾನೂನುಗಳ ನಡುವೆ ಯಾವುದೇ ಸಂಬಂಧವಿರುವುದಿಲ್ಲ ಎಂದು ಭಾವಿಸುವುದು ದುರದೃಷ್ಟಕರ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಪ್ರಕರಣ ನಡೆದದ್ದು 2003ರಲ್ಲಿ. ನಿರ್ದೇಶಕ ಸೂತ್ರಗಳಲ್ಲಿ ಸಮಾನ ನಾಗರಿಕ ಸಂಹಿತೆಯೂ ಸೇರಿಕೊಂಡಿರುವಾಗ ಮಹಿಳೆಯರಿಗೆ ಉತ್ತರಾಧಿಕಾರದ ಹಕ್ಕನ್ನು ನೀಡುವ ವಿಚಾರಗಳನ್ನೂ ಒಳಗೊಂಡಂತೆ ಸಮಾನ ಸಂಹಿತೆಯನ್ನು ಜಾರಿ ಮಾಡಲು ಸರಕಾರಕ್ಕೆ ಯಾವ ತೊಂದರೆಯಿದೆ ಎಂದು ನ್ಯಾಯಾಲಯ ಪ್ರಶ್ನಿಸಿತ್ತು. 2022ರ ವಿನಿತಾ ಶರ್ಮಾ ಪ್ರಕರಣದಲ್ಲಿ ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕುಗಳನ್ನು ನೀಡುವಾಗಲೂ ಅದನ್ನು ಪೂರ್ವಾನ್ವಯವಾಗಿ ಜಾರಿ ಮಾಡಿತ್ತು. ವೇತನ ಪಾವತಿಯ ವಿಷಯದಲ್ಲಿ ಮಹಿಳೆಯರಿಗೆ ಅನ್ಯಾಯವಾಗುತ್ತಿರುವುದನ್ನು ಗಮನಿಸಿದ ಸರ್ವೋಚ್ಚ ನ್ಯಾಯಾಲಯವು ಮಧ್ಯ ಪ್ರವೇಶ ಮಾಡಿ “ಸಮಾನ ಕೆಲಸಕ್ಕೆ ಸಮಾನ ವೇತನ” ಎಂಬ ತತ್ತ್ವವನ್ನು 'ನಕಾರಾ' ಪ್ರಕರಣದಲ್ಲಿ ಜಾರಿಗೊಳಿಸಿತು.

2017ರ ಶಾಯರಾ ಬಾನೋ ಪ್ರಕರಣದಲ್ಲಿ ತ್ರಿವಳಿ ತಲಾಕ್ ಪದ್ಧತಿಯು ಅವಶ್ಯಕ ಧಾರ್ಮಿಕ ಆಚರಣೆಗಳ ಭಾಗವಲ್ಲ ಎಂದು ತೀರ್ಪು ನೀಡಿದರೂ ನಿಕಾಹ್ ಹಲಾಲಾ ಮತ್ತು ಬಹುಪತ್ನಿತ್ವದಂತಹ ವಿಚಾರಗಳನ್ನು ಶಾಸಕಾಂಗವೇ ಬಗೆಹರಿಸಲಿ ಎಂಬ ನಿಲುವು ತಾಳಿತು. 1985ರ ಶಾ ಬಾನು ಪ್ರಕರಣದಲ್ಲಿ ಮುಸ್ಲಿಂ ಮಹಿಳೆಯರಿಗೆ ಜೀವನಾಂಶದ ಹಕ್ಕನ್ನು ಕ್ರಿಮಿನಲ್ ಕಾನೂನುಗಳ ಸೆಕ್ಷನ್ 125ರ ಅಡಿಯಲ್ಲಿ ನಿರ್ಧರಿಸಬಹುದು ಎಂದು ತೀರ್ಪು ನೀಡಿತು. ಈ ತೀರ್ಪಿನಿಂದ ಮುಸ್ಲಿಂ ಮಹಿಳೆಯರಿಗೆ ಮಾತ್ರವಲ್ಲ, ಉಪೇಕ್ಷೆಗೊಳಗಾದ ಪೋಷಕರು ಮತ್ತು ಹೆಣ್ಣುಮಕ್ಕಳಿಗೂ ಹೊಸ ಅವಕಾಶದ ಬಾಗಿಲು ತೆರೆಯಿತು. ವಿಶಾಖಾ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ಮಾರ್ಗದರ್ಶಿ ಸೂತ್ರಗಳೇ ಲೈಂಗಿಕ ದೌರ್ಜನ್ಯ ತಡೆ ಕಾಯಿದೆ (POSH)ಗೆ ಆಧಾರವಾದವು. ಬಹುಪತ್ನಿತ್ವದ ನಿಷೇಧದಿಂದ ಪಾರಾಗಲು ಪುರುಷರು ಧರ್ಮವನ್ನೇ ಬದಲಾಯಿಸುವ ಪ್ರಕರಣಗಳೂ ನ್ಯಾಯಾಲಯದ ಟೀಕೆಗೆ ಒಳಗಾಗಿವೆ.

ಮೇಲಿನ ಎಲ್ಲ ಪ್ರಕರಣಗಳಲ್ಲೂ ಸರ್ವೋಚ್ಚ ನ್ಯಾಯಾಲಯವು “ಪ್ರತಿಯೊಂದು ಪ್ರಕರಣದಲ್ಲಿಯೂ ಮಧ್ಯೆ ಪ್ರವೇಶ ಮಾಡಿ ಕಾನೂನುಗಳ ವಿವೇಚನೆಯನ್ನು ಮಾಡುವುದು ಸಾಧ್ಯವಿಲ್ಲ, ಹೀಗಾಗಿ ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಿ” ಎಂದು ಸರಕಾರಕ್ಕೆ ಸಲಹೆ ನೀಡಿದೆ. ಸಮಾನ ನಾಗರಿಕ ಸಂಹಿತೆಯು ದೇಶದ ಏಕತೆಯ ದೃಷ್ಟಿಯಿಂದಲೂ ಅಗತ್ಯ ಎಂದು ನ್ಯಾಯಾಲಯಗಳು ಅಭಿಪ್ರಾಯ ವ್ಯಕ್ತಪಡಿಸಿವೆ. ಈ ಹಿನ್ನೆಲೆಯಲ್ಲಿ ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವ ವಿಚಾರದಲ್ಲಿ ಕೇಂದ್ರ ಸರಕಾರದಿಂದ ಮುಚ್ಚಳಿಕೆಯನ್ನೂ ನ್ಯಾಯಾಲಯ ಪಡೆದುಕೊಂಡಿದೆ. ಆದರೆ ದುರದೃಷ್ಟವಶಾತ್, ಸಮಾನ ನಾಗರಿಕ ಹಕ್ಕುಗಳ ವಿಚಾರ ಇಂದಿಗೂ ನಿರ್ದೇಶಕ ಸೂತ್ರಗಳ ಅಡಿಯಲ್ಲಿಯೇ ಜಡವಾಗಿ ಉಳಿದುಬಿಟ್ಟಿವೆ. ಸಮಾನ ನಾಗರಿಕ ಸಂಹಿತೆಯ ವಿರೋಧ ಏನೇ ಇರಲಿ, ಅದನ್ನು ಜಾರಿಗೊಳಿಸುವುದು ಸರಕಾರದ ಸಾಂವಿಧಾನಿಕ ಕರ್ತವ್ಯ. ಇದು ಯಾವುದೇ ಧರ್ಮ, ಜಾತಿ, ಜನಾಂಗಗಳ ಹಕ್ಕುಗಳನ್ನು ಮೊಟಕುಗೊಳಿಸುವ ಪ್ರಕ್ರಿಯೆಯಲ್ಲ. ಇದು ನೈತಿಕತೆಯ ವಿಚಾರ, ಸಮಾಜದ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ವಿಚಾರ. ಆದುದರಿಂದ ದೇಶದ ಎಲ್ಲ ನಾಗರಿಕರಿಗೂ ಸಮಾನ ಹಕ್ಕುಗಳನ್ನು ದಯಪಾಲಿಸುವ ಸಂಹಿತೆಗೆ ವಿರೋಧ ಸಲ್ಲದು.

# ಮರೆಯಲಾರದ ಮಾಣಿಕ್ಯ ಅನಂತಕುಮಾರ

ಅನಂತಕುಮಾರರು ಮರೆಯಲಾರದ, ಮರೆಯಬಾರದ ಮಾಣಿಕ್ಯ. ಅವರ ವ್ಯಕ್ತಿತ್ವ, ಕರ್ತೃತ್ವ, ನೇತೃತ್ವಗಳ ಆದರ್ಶವನ್ನು ಯುವಕರಿಗೆ ಪರಿಚಯಿಸುವ ದಿಸೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಅದಮ್ಯಚೇತನ ಸಂಸ್ಥೆಯು ಅವರ ನೆನಪುಗಳನ್ನು ಸದಾ ಜೀವಂತವಾಗಿರಿಸುತ್ತಿದೆ.

ರಾಜಕೀಯರಂಗದ ಧ್ರುವತಾರೆ, ಅನಂತಕುಮಾರರ ಹೆಸರು ಭಾರತೀಯ ರಾಜಕೀಯ ಇತಿಹಾಸದಲ್ಲಿ ಅಜರಾಮರ. ಅವರು ಅಭಿವೃದ್ಧಿಯ ಹರಿಕಾರ, ಅತ್ಯಂತ ಸರಳ ಸಜ್ಜನ ರಾಜಕಾರಣಿ. ''ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ. ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ, ಎಲ್ಲರೊಳಗೊಂದಾಗು - ಮಂಕುತಿಮ್ಮ'' ಎಂಬ ಡಿವಿಜಿ ಅವರ ಕಗ್ಗದ ಬೆಳಕಿನಲ್ಲಿ ಅವರು ತಮ್ಮ ಜೀವನವನ್ನು ನಡೆಸಿದರು. ತಾನೇ ಉರಿದು ಬೆಳಕು ನೀಡುವ ಜ್ಯೋತಿಯಂತೆ, ಸಮಾಜದ ಹಿತಕ್ಕಾಗಿ ಅವಿಶ್ರಾಂತ ದುಡಿಮೆ ಸಲ್ಲಿಸಿ ಸಮಾಜಕ್ಕೆ ಬೆಳಕು ನೀಡಿದರು.

ದೈವಭಕ್ತ, ಅಭಿವೃದ್ಧಿಯ ಹರಿಕಾರ, ಶಿಕ್ಷಣ ಪ್ರೇಮಿ, ಅಜಾತಶತ್ರು, ಸಮಾಜ ಸುಧಾರಣೆಗೆ ಮುನ್ನುಡಿ ಬರೆದ ಸುಧಾರಕ, ಜಾತಿ-ಪಂಥವನ್ನು ಮೀರಿ ನಿಂತ ನಿಜವಾದ ಜಾತ್ಯತೀತ ನಾಯಕ, ನಾಯಕರನ್ನು ಸೃಷ್ಟಿ ಮಾಡುವ ತರಬೇತುದಾರ, ಎಂತಹ ಸಂಕಷ್ಟ ಬಂದರೂ ನಂಬಿದವರನ್ನು ಕೈ ಬಿಡದ ಮಹಾನ್ ನಾಯಕ, ಅತ್ಯುತ್ತಮ ಸಂಸದೀಯ ಪಟು, ಬಡವರ, ದುಃಖಿತರ, ಅನಾಥರ ಬಗ್ಗೆ ಅಪಾರ ಕರುಣೆಯುಳ್ಳ ಮಾತೃಹೃದಯಿ, ಅಪ್ಪಟ ದೇಶಪ್ರೇಮಿ, ಜನರಿಂದ ಜನರಿಗಾಗಿ ದುಡಿದ ಜನನಾಯಕ, ಶಿಸ್ತಿನ ಸಿಪಾಯಿ, ಎಂಥ ಸಂದರ್ಭದಲ್ಲೂ ಧೃತಿಗೆಡದ ಸಮರ್ಥ ನಾಯಕ, ರಾಜಕೀಯ ಸಮಸ್ಯೆಗಳನ್ನು ತಮ್ಮ ಚತುರತೆಯಿಂದ ಬಿಡಿಸಿದ ಮಹಾನ್ ಚಾಣಕ್ಯ, ಕ್ರಿಯಾಶೀಲ ವ್ಯಕ್ತಿತ್ವ, ಮನೆಯಿಲ್ಲದ ನಿರ್ಗತಿಕರಿಗೆ, ನೆಲೆ ಇಲ್ಲದವರಿಗೆ ಸೂರು ಕೊಟ್ಟವರು, ಸ್ಫೂರ್ತಿಯ ಸೆಲೆ, ನಡೆಯಲ್ಲಿ ರಾಮ, ಭಕ್ತಿಯಲ್ಲಿ ಹನುಮಂತ, ರಾಜಕೀಯದಲ್ಲಿ ಕೃಷ್ಣ, ಅನೇಕ ಭಾಷೆಗಳನ್ನು ಬಲ್ಲ ಬಹುಭಾಷಾ ಪಂಡಿತ, ಸ್ಥಿತಪ್ರಜ್ಞ. ಪ್ರಕೃತಿಪ್ರೇಮಿ, ಆಪದ್ಬಾಂಧವ - ಇವೆಲ್ಲ ವಿಶೇಷಣಗಳಿಗೂ ಅರ್ಹತೆ ಹೊಂದಿದ ಏಕೈಕ ವ್ಯಕ್ತಿಯಿದ್ದರೆ ಅದು ಅನಂತಕುಮಾರ್. ಅವರ ಜೊತೆ ಕೆಲಸ ಮಾಡುವುದೇ ಒಂದು ಸತ್ಕಾರ್ಯ, ಎಷ್ಟು ಕೆಲಸ ಮಾಡಿದರೂ ಇನ್ನಷ್ಟು ಒಳ್ಳೆಯ ಕೆಲಸ ಮಾಡಬೇಕೆಂಬ ಅವರ ಹಸಿವು ನಮಗೂ ಪ್ರೇರಣೆ ನೀಡುತ್ತಿತ್ತು.

ನನ್ನ ವಿದ್ಯಾರ್ಥಿದೆಸೆಯಿಂದಲೂ ಅನಂತಕುಮಾರರನ್ನು ನಾನು ನೋಡುತ್ತಿದ್ದೆ. ಅನಂತಕುಮಾರರು ಚುನಾವಣೆಗೆ ನಿಲ್ಲುವ ಮುನ್ನವೇ ನನಗೆ ಅವರ ಪರಿಚಯವಿತ್ತು. ನಾನು ವಿಧಾನಸೌಧದ ಸಚಿವಾಲಯದಲ್ಲಿ ಕೆಲಸ ಮಾಡುತ್ತಿದ್ದೆ, ಒಕ್ಕಲಿಗರ ಸಂಘದ ಕಚೇರಿಯಲ್ಲಿಯೂ 15ವರ್ಷ ಕೆಲಸ ಮಾಡಿದ್ದೇನೆ. ಕಾರ್ಯದರ್ಶಿಯಾಗಿ, ಜಂಟಿ ಕಾರ್ಯದರ್ಶಿಯಾಗಿ ನಂತರ ಉಪಾಧ್ಯಕ್ಷನಾಗಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಅನಂತಕುಮಾರರು ಚುನಾವಣೆಗೆ ಸ್ಪರ್ಧಿಸಿದಾಗ ವಿಜಯನಗರದ ಭಾಗದಲ್ಲಿ ಸೋಮಣ್ಣನವರ ಜೊತೆ ಚುನಾವಣಾ ಪ್ರಚಾರದಲ್ಲಿಯೂ ಭಾಗವಹಿಸಿದ್ದೆ. ರಾಜಕೀಯ ಕ್ಷೇತ್ರದಲ್ಲಿ ಹಲವಾರು ವರ್ಷ ಕೆಲಸ ಮಾಡಿ ಸೋತು ಸೋತು ರಾಜಕೀಯದಿಂದ ನಿವೃತ್ತನಾಗಬೇಕು ಎಂಬ ಪರಿಸ್ಥಿತಿಯಲ್ಲಿ ನಾನು ಅನಂತಕುಮಾರರನ್ನು ಭೇಟಿಯಾಗಲು ಬಯಸಿದ್ದೆ. ನನ್ನ ಜೊತೆ ಬರುವಂತೆ ಸೋಮಣ್ಣನವರನ್ನು ಕೇಳಿಕೊಂಡಾಗ ಅವರು, ''ನನ್ನನ್ನೇಕೆ ಕರೆದುಕೊಂಡು ಹೋಗುತ್ತಿಯಾ? ಅನಂತಕುಮಾರರು ನಿನಗೆ ಚೆನ್ನಾಗಿ ಗೊತ್ತು, ಹೋಗು" ಎಂದಿದ್ದರು. ಅಂತೆಯೇ ಅವರ ಮನೆಯ ಹತ್ತಿರ ಬಂದಾಗ ಅವರು ತಮ್ಮ ಅಂಗರಕ್ಷಕನನ್ನು ಕಳಿಸಿ ಮೂರನೇ ಮಹಡಿಗೆ ನನ್ನನ್ನು ಕರೆಯಿಸಿಕೊಂಡರು. ನಾನು ಹೋದಾಗ ಅವರು ಪೂಜೆ ಮಾಡುತ್ತಿದ್ದರು. ನನ್ನನ್ನು ನೋಡಿದ ಕೂಡಲೇ ಬೆರಳಿನಿಂದ ವಿಜಯದ ಸಂಕೇತ ತೋರಿಸಿ, ನನ್ನ ಶಕ್ತಿ + ನಿನ್ನ ಶಕ್ತಿ ಅಂದರೆ ಗೆಲುವು ಎಂದರು. ನನಗೆ ಆಶ್ಚರ್ಯವಾಯಿತು. ನಾನು ಗೆದ್ದೆ ಅಂದುಕೊಂಡೆ. ಒಳಗಡೆ ಕೂಡಿಸಿ ಕಾಫಿ ತರಿಸಿದರು. ವಿಧಾನಪರಿಷತ್ತಿಗೆ ಪದವೀಧರ ಕ್ಷೇತ್ರದಿಂದ ಚುನಾವಣೆ ನಡೆಯುವುದಿತ್ತು. ನನ್ನ ಎದುರಿನಲ್ಲೇ ಪಕ್ಷದ ಅಧ್ಯಕ್ಷ, ಅಮಿತ್ ಶಾ ಜೊತೆ ಹಿಂದಿಯಲ್ಲಿ ಮಾತನಾಡಿದರು. ನನಗೇನೂ ಅರ್ಥವಾಗದಿದ್ದರೂ ನಂತರ ಇಂಗ್ಲಿಷಿನಲ್ಲಿ ಮಾತಾಡಿದ್ದು ಅರ್ಥವಾಯಿತು. ದೇವೇಗೌಡರು ಮಾಗಡಿಯಿಂದ ಬಂದಿದ್ದಾರೆ, ಅವರು ಒಕ್ಕಲಿಗರ ಸಂಘದ ಅಧ್ಯಕ್ಷರು, ಇವರ ಸಮುದಾಯದ ಬೆಂಬಲದಿಂದ ನಾನು ಆರು ಬಾರಿ ಆಯ್ಕೆಯಾಗಿ ಬಂದಿದ್ದೇನೆ. ನಾಳೆ ಬೆಳಿಗ್ಗೆ ಅವರಿಗಾಗಿ ಒಂದು ಸೀಟು ಅನೌನ್ಸ್ ಮಾಡಬೇಕು ಅಂದರು. ಮರುದಿನವೇ ಸೀಟು ಅನೌನ್ಸ್ ಆಯಿತು. ರಾಜಕೀಯವಾಗಿ ಸತ್ತೇ ಹೋಗಿದ್ದ ನಾನು ಅವರ ಆಶೀರ್ವಾದದಿಂದ ಚುನಾವಣೆಯಲ್ಲಿ ವಿಜಯಗಳಿಸಿ ಪುನರ್ಜನ್ಮ ಪಡೆದೆ. ಅನಂತಕುಮಾರರ ಋಣವನ್ನು ನಾನು ಎಂದೆಂದಿಗೂ ತೀರಿಸಲಾರೆ.



ಅ. ದೇವೇಗೌಡ
ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು

ನಾನು ಒಕ್ಕಲಿಗರ ಸಂಘದ ಲಾ ಕಾಲೇಜು ಚೇರ್‌ಮನ್ ಆಗಿದ್ದ ವರ್ಷ, ಅದು ಅನಂತಕುಮಾರರ ಬದುಕಿನ ಕೊನೆಯ ವರ್ಷ. ಬಹುಶಃ ಅವರ ಆರೋಗ್ಯ ಆಗಲೇ ಹದಗೆಡುತ್ತಿತ್ತು. ಮಡಿಕೇರಿಯು ಭೀಕರ ಪ್ರವಾಹದಿಂದ ತತ್ತರಿಸಿತ್ತು. ಅದರ ಪೂರ್ಣ ಮಾಹಿತಿ ಕೊಡುವಂತೆ ನನಗೆ ತಿಳಿಸಿದ್ದರು. ಅದರಂತೆ, ಎಲ್ಲ ಮಾಹಿತಿ ಸಂಗ್ರಹ ಮಾಡಿ, ಬಸವನ ಗುಡಿಯ ಮೈದಾನದಲ್ಲಿ ಅವರಿಗೆ ಕೊಟ್ಟಿದ್ದೆ. ಅದೇ ನಮ್ಮ ಅವರ ಕೊನೆಯ ಭೇಟಿಯಾಗಿತ್ತು. ವೈಯಕ್ತಿಕ ಸಂಕಷ್ಟಗಳನ್ನು ನಿರ್ಲಕ್ಷಿಸಿ ಜನರ ಸಂಕಷ್ಟಗಳಿಗೆ ಸ್ವಯಂಪ್ರೇರಿತರಾಗಿ ನೆರವಾಗುವ ಅಪರೂಪದ ನಾಯಕರು, ತಾವು ಎಂಬುದನ್ನು ಕೊನೆಯ ಉಸಿರಿನ ವರೆಗೂ ನಿರೂಪಿಸಿದವರು, ಅನಂತಕುಮಾರ್.

ಒಮ್ಮೆ, ನಮ್ಮ ಸಂಬಂಧಿಕರೊಬ್ಬರನ್ನು ಮೈಸೂರಿನಿಂದ ತಮಿಳುನಾಡಿಗೆ ವರ್ಗ ಮಾಡಿಬಿಟ್ಟಿದ್ದರು. ಅವರಿಗೆ ಅಲ್ಲಿಯ ಭಾಷೆ ಗೊತ್ತಿರಲಿಲ್ಲ. ಸೋಮಣ್ಣನವರ ಸಲಹೆಯ ಮೇರೆಗೆ, ನಾನು ಅನಂತಕುಮಾರರನ್ನು ಭೇಟಿಯಾದೆ. ಅವರು ವರ್ಗಾವಣೆ ರದ್ದು ಮಾಡಿದ ಆದೇಶವನ್ನು ಮನೆಗೇ ಕಳುಹಿಸಿಕೊಟ್ಟರು. ನಮ್ಮಂತಹ ಸಾಮಾನ್ಯ ಕಾರ್ಯಕರ್ತರ ಬೇಡಿಕೆಗಳಿಗೂ ಸಹಜವಾಗಿ ಮತ್ತು ಸುಲಭವಾಗಿ ಸ್ಪಂದಿಸುವ ಅವರು ನಮ್ಮ ಪಾಲಿಗೆ ಆಪದ್ಬಾಂಧವ.

ಕರ್ನಾಟಕದ ಪ್ರಗತಿಗೆ ಅನಂತಕುಮಾರರ ಕೊಡುಗೆಯನ್ನು ಪಟ್ಟಿ ಮಾಡುವುದು ಕಷ್ಟ. ಹಿರಿಯ ನಾಯಕರ ಜೊತೆಗೆ ಅವರಿಗಿದ್ದ ಒಡನಾಟ, ಕಾರ್ಯಕರ್ತರ ಜೊತೆ ಅವರ ಬಾಂಧವ್ಯ, ಬಡವರ ಬಗ್ಗೆ ಕಾಳಜಿ, ನಾಡು, ನುಡಿಗಳ ಬಗ್ಗೆ ನಿಷ್ಠೆ, ಹಿರಿಯ ಮುತ್ಸದ್ದಿಯಂತೆ ಮಾತು ಮತ್ತು ನಡವಳಿಕೆ - ಇವೆಲ್ಲವೂ ಅವರನ್ನು ಓರ್ವ ಆದರ್ಶ ರಾಜಕಾರಣಿಯನ್ನಾಗಿ ರೂಪಿಸಿದ್ದವು ಎಂದರೆ ಅತಿಶಯೋಕ್ತಿಯಲ್ಲ.

## ನಿತ್ಯ ಅನ್ನದಾನವೆಂಬ ನಿರಂತರ ಸೇವಾಕಾರ್ಯ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಸೆಪ್ಟೆಂಬರ್ ತಿಂಗಳಲ್ಲಿ ವಿತರಣೆಯಾದ ಊಟದ ಅಂದಾಜು ಸಂಖ್ಯೆ | ಇಂದಿನ ವರೆಗೆ ವಿತರಣೆಯಾದ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ: ಮಧ್ಯಾಹ್ನ 2.00 ರಿಂದ 3.00 | 4,500 | 1,61,100 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ, ಜೈನ್ ಟೆಂಪಲ್ ಮುಂಭಾಗ: ಮಧ್ಯಾಹ್ನ 12.30 ರಿಂದ 1.30 | 3,000 | 1,05,500 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ: ಮಧ್ಯಾಹ್ನ 12.30 ರಿಂದ 1.30 | 3,000 | 86,700 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ : ಮಧ್ಯಾಹ್ನ 12.30 ರಿಂದ 1.30 | 4,500 | 41,550 |
| 5 | ಅನಂತ ಪ್ರೇರಣಾ ಕೇಂದ್ರ ಸೌತ್ ಎಂಡ್ ವೃತ್ತ: ಮಧ್ಯಾಹ್ನ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 960 | 19,080 |
| | **ಒಟ್ಟು ಅಂದಾಜು** | **15,960** | **4,13,930** |

# "ಕೊಟ್ಟು ಹೋದ" ಅನಂತಕುಮಾರ್

**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರಕಾರ




"ಬಿಟ್ಟು ಹೋಗುವುದಕ್ಕಿಂತ ಕೊಟ್ಟು ಹೋಗುವುದು ಲೇಸಯ್ಯ" ಎಂದ ಪುರಂದರದಾಸರ ವಾಣಿಯಂತೆ ಬದುಕಿದವರು, ಅನಂತಕುಮಾರ್. "ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ, ನಗುವ ಕೇಳುತ ನಗುವುದತಿಶಯದ ಧರ್ಮ, ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ" ಎಂಬ ಡಿವಿಜಿಯವರ ಕಗ್ಗದಂತೆ ಯಾವಾಗಲೂ ನಗುನಗುತ್ತ, ಜನರನ್ನು ಕೂಡ ನಗಿಸಿ, ಕಾಲ ಕಳೆಯುತ್ತ ಇದ್ದವರು, ಅನಂತಕುಮಾರ್. ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ. ಜನನ ಉಚಿತ, ಮರಣ ಖಚಿತ. ಈ ಹುಟ್ಟು-ಸಾವಿನ ಮಧ್ಯದಲ್ಲಿ ನಾವು ಏನು ಮಾಡುತ್ತೇವೆ ಅನ್ನುವುದು ಬಹಳ ಮುಖ್ಯ. ಅನಂತಕುಮಾರ್ ಇಂದು ನಮ್ಮ ನಡುವೆ ಇಲ್ಲ ಎಂದು ನಮಗೆ ಅನ್ನಿಸುತ್ತಿಲ್ಲ; ತಮ್ಮ ಸಾಧನೆಗಳ ಮೂಲಕ ನಮ್ಮ ನಡುವೆಯೇ ಇದ್ದಾರೆ ಎಂದನ್ನಿಸುತ್ತದೆ.

ನಾನು ಶಾಲೆಯಲ್ಲಿ ಓದಿದ ಒಂದು ಸುಭಾಷಿತ ಹೀಗಿದೆ - "ಪರೋಪಕಾರಾಯ ಫಲಂತಿ ವೃಕ್ಷಾಃ, ಪರೋಪಕಾರಾಯ ವಹಂತಿ ನದ್ಯಃ, ಪರೋಪಕಾರಾಯ ದುಹಂತಿ ಗಾವಃ, ಪರೋಪಕಾರಾರ್ಥಮಿದಂ ಶರೀರಂ." ತೇಜಸ್ವಿನಿಯವರು 400 ವಾರಗಳಿಂದ ನಿರಂತರವಾಗಿ ಹಸಿರು ಭಾನುವಾರವನ್ನು ನಡೆಸಿಕೊಂಡು ಬಂದಿದ್ದಾರೆ. ಗಿಡ ನೆಡುವ ಅವರ ಶ್ರಮ ಸ್ವಾರ್ಥಕ್ಕಲ್ಲ, ನೆಟ್ಟ ಗಿಡಗಳು ಮರವಾಗಿ ಬೆಳೆದು ಹಣ್ಣು ಕೊಡುತ್ತವೆ, ನೆರಳು ಕೊಡುತ್ತವೆ. ಈ ಮರಗಳು ತಮಗಾಗಿ ಯಾವ ಪ್ರಯೋಜನವನ್ನೂ ಪಡೆಯುವುದಿಲ್ಲ. ಹಸುವೂ ಕೂಡ ಹಾಲು ಕೊಡುತ್ತದೆ, ಹೊಲ ಉಳುತ್ತದೆ. ಗಾಡಿಯಲ್ಲಿ ಕೂಡಿಸಿಕೊಂಡು ಹೋಗುತ್ತದೆ. ಅದು ಸ್ವಂತ ಲಾಭಕ್ಕೆಂದು ಏನನ್ನೂ ಮಾಡುವುದಿಲ್ಲ. ನದಿಯು ಕುಡಿಯಲು ವ್ಯವಸಾಯ ಮಾಡಲು ನೀರು ಕೊಡುತ್ತದೆ. ಅದು ನೀರನ್ನು ತನ್ನ ಸ್ವಂತಕ್ಕೇನೂ ಬಳಸುವುದಿಲ್ಲ. ಅದೇ ರೀತಿ, ಮನುಷ್ಯನ ಶರೀರವೂ ಸಹ ಬೇರೆಯವರ ಸಹಾಯಕ್ಕೆ ಇರಬೇಕು ಎಂಬುದು ಸುಭಾಷಿತದ ಅರ್ಥ. ಅದರಂತೆಯೇ, ಅನಂತಕುಮಾರರು ತಮ್ಮ ಬದುಕನ್ನು ಬೇರೆಯವರ ಸಹಾಯಕ್ಕೆ ಮುಡುಪಾಗಿಟ್ಟಿದ್ದರು. ಆದ್ದರಿಂದ ಅವರು ನಮ್ಮ ನಡುವಿನಿಂದ ಮರೆಯಾಗಿಲ್ಲ ಎಂದು ನನ್ನ ಅನಿಸಿಕೆ.

ಅನಂತಕುಮಾರರು ನನಗೆ ವಿದ್ಯಾರ್ಥಿ ದೆಸೆಯಿಂದಲೇ ಪರಿಚಯ. ನಾನು ಎಸ್. ಜೆ. ಆರ್. ಸಿ. ಕಾಲೇಜ್‌ನಲ್ಲಿ ವಿದ್ಯಾರ್ಥಿ ನಾಯಕನಾಗಿದ್ದೆ. ಅವರು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ನಾಯಕರಾಗಿದ್ದರು. ಅನಂತಕುಮಾರರು ಶಾಸಕರ ಭವನಕ್ಕೆ ಆಗಾಗ ಬಂದು ಹೋಗುತ್ತಿದ್ದರು. ನಾನು ಬಂಗಾರಪ್ಪನವರ ಗರಡಿಯಲ್ಲಿ ಓಡಾಡುತ್ತಿದ್ದೆ. ನನಗೆ 1985ರಲ್ಲಿ ಸಾತನೂರು ಕ್ಷೇತ್ರದಿಂದ ವಿಧಾನಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಟಿಕೆಟ್ ಸಿಕ್ಕಿತು. ಈ ಸುದ್ದಿಯನ್ನು ತಿಳಿದ ಅನಂತಕುಮಾರ್ ಬಹಳ ಸಂತೋಷ ಪಟ್ಟಿದ್ದರು. ಅಂದು ಬಿ.ಜೆ.ಪಿ. ಇಂದಿನಷ್ಟು ಪ್ರಬಲವಾಗಿರಲಿಲ್ಲ. ಶ್ರೀ ಬಿ. ಎಸ್. ಯಡಿಯೂರಪ್ಪ, ಶ್ರೀ ಬಿ. ಬಿ. ಶಿವಪ್ಪ ಮತ್ತು ಎ. ಕೆ. ಸುಬ್ಬಯ್ಯ ಮುಂತಾದ ಕೆಲವೇ ಕೆಲವು ಪ್ರಭಾವಿ ವ್ಯಕ್ತಿಗಳು ಪಕ್ಷದಲ್ಲಿದ್ದರು. ಪದವಿ ತರಗತಿಯ ಕೊನೆಯ ವರ್ಷದ ವಿದ್ಯಾರ್ಥಿಯಾಗಿದ್ದ ಒಬ್ಬ ವಿದ್ಯಾರ್ಥಿನಾಯಕನಿಗೆ ಈ ಚಿಕ್ಕವಯಸ್ಸಿನಲ್ಲೇ ದೊರೆತ ಅವಕಾಶಕ್ಕೆ ಸಂತೋಷಪಟ್ಟ ಅನಂತಕುಮಾರರು ಪಕ್ಷಭೇದವನ್ನು ಮರೆತು 5000 ರೂಪಾಯಿಗಳನ್ನು ಸಂಗ್ರಹಿಸಿ ನನಗೆ ತಲುಪಿಸಿದ್ದರು. ಅಂದಿನ ದಿನಗಳಲ್ಲಿ ಐದು ಸಾವಿರ ರೂಪಾಯಿ ಅಂದರೆ ದೊಡ್ಡ ಮೊತ್ತ! ಹೀಗೆ ಅನಂತಕುಮಾರ್ ಮತ್ತು ನನ್ನ ನಡುವೆ ಸ್ನೇಹ ಬೆಳೆಯಿತು. ಮುಂದೆ ಅನಂತಕುಮಾರರು ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ ಗೆಲುವು ಸಾಧಿಸಿದರು; ಕೇಂದ್ರದಲ್ಲಿ ಸಚಿವರೂ ಆದರು. ಅವರು ಕೇಂದ್ರದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದಾಗ ನಾನು ಎಸ್. ಎಂ. ಕೃಷ್ಣ ಸರ್ಕಾರದಲ್ಲಿ ನಗರಾಭಿವೃದ್ಧಿ ಖಾತೆಯ ಸಚಿವನಾಗಿದ್ದೆ. ಆ ಸಮಯದಲ್ಲಿ ಮೆಟ್ರೋ ಬದಲು ಮೋನೋರೈಲ್ ಪ್ರಾರಂಭಿಸುವ ರಾಜ್ಯಸರಕಾರದ ನಿರ್ಧಾರವನ್ನು ನಾನು ವಿರೋಧಿಸಿದ್ದೆ. ನನ್ನ ವಿರೋಧಕ್ಕೆ ಕೃಷ್ಣ ಅಸಮಾಧಾನಗೊಂಡಿದ್ದರು. ಕೊನೆಗೆ, ಈ ಬಗ್ಗೆ ವಿದೇಶಗಳಲ್ಲಿ ಅಧ್ಯಯನ ಮಾಡಿ ವರದಿ ಸಲ್ಲಿಸುವಂತೆ ನನ್ನನ್ನೂ ಸೇರಿಕೊಂಡಂತೆ ಒಂದು ತಂಡವನ್ನು ವಿದೇಶಗಳಿಗೆ ಕಳಿಸಿದ್ದರು. ಮಲೇಶಿಯಾ, ಬ್ಯಾಂಕಾಕ್, ಆಸ್ಟ್ರೇಲಿಯಾ, ದುಬೈಗಳಲ್ಲಿ ಮೋನೋರೈಲನ್ನು ನೋಡಿ ನಂತರ ದೆಹಲಿಯ ಮೆಟ್ರೋ ರೈಲನ್ನೂ ನೋಡಿದೆವು. ನಮ್ಮ ನಗರಕ್ಕೆ ಮೆಟ್ರೋ ರೈಲೇ ಸರಿ ಎಂದು ಮುಖ್ಯಮಂತ್ರಿಗಳಿಗೆ ವರದಿ ಸಲ್ಲಿಸಿದೆವು. ನಮ್ಮ ಹೇಳಿಕೆಯನ್ನು ಅನಂತಕುಮಾರರೂ ಅನುಮೋದಿಸಿದರು. ಮರುದಿನವೇ, ಅನಂತಕುಮಾರ್ ನಮ್ಮನ್ನು ವಾಜಪೇಯಿಯವರ ಭೇಟಿಗೆ ಕರೆದುಕೊಂಡು ಹೋಗಿ ಅವರಿಗೆ ಮಾಹಿತಿಗಳನ್ನು ನೀಡಿದರು. ಬೆಂಗಳೂರಿಗೆ ಮೆಟ್ರೋ ಬಂದಿತು. ಅನಂತಕುಮಾರ್ ಮತ್ತು ಕೃಷ್ಣ ಇಲ್ಲದಿದ್ದರೆ ಬೆಂಗಳೂರಿಗೆ ಮೆಟ್ರೋ ಬರುತ್ತಿರಲಿಲ್ಲ. ಈ ಹಿಂದೆಯೂ, ಕಾವೇರಿ ಸಮಸ್ಯೆ ತೀರಾ ಉಲ್ಬಣಗೊಂಡಿತ್ತು. ಆಗ ರಾತ್ರೋರಾತ್ರಿ ಕರ್ನಾಟಕದ ಅಫಿಡೆವಿಟ್ ಅನ್ನು ಬದಲಾಯಿಸಿ ಕೋರ್ಟಿಗೆ ಸಲ್ಲಿಸಿ, ಕರ್ನಾಟಕವನ್ನು ಸಮಸ್ಯೆಯಿಂದ ಪಾರು ಮಾಡಿದ್ದರು. ಅನಂತಕುಮಾರರು ಪಕ್ಷಭೇದವನ್ನು ಮರೆತು ರಾಜ್ಯದ ಹಿತ ಕಾಯುತ್ತಿದ್ದರು. ಇವತ್ತು ಅನಂತಕುಮಾರರು ಇದ್ದಿದ್ದರೆ ಕಾವೇರಿಯಂತಹ ಬಹುತೇಕ ಸಮಸ್ಯೆಗಳು ಇರುತ್ತಿರಲಿಲ್ಲ ಎಂದು ನಮಗೆಲ್ಲ ಅನಿಸುತ್ತಿದೆ.






ಕಳೆದ 40 ವರ್ಷಗಳಿಂದ ಸಾವಿರಾರು ಜನ ಕಾರ್ಯಕರ್ತರನ್ನು ಅನಂತಕುಮಾರ್ ಬೆಳೆಸಿದ್ದಾರೆ. ಅನಂತಕುಮಾರ್ ಇಲ್ಲದ್ದಕ್ಕೆ ಅವರು ತಬ್ಬಲಿಗಳಾಗಿದ್ದಾರೆ. ಆದರೆ, ಅನಂತಕುಮಾರರ ಬದುಕಿನ ಪ್ರೀತಿಯ ರೀತಿ ಅವರನ್ನು ಗಟ್ಟಿಯಾಗಿಸುತ್ತಿದೆ. ಹೀಗೆ ನಂಬಿಕೆಯ ಬೇರು ಗಟ್ಟಿಯಾಗಿದ್ದರೆ ಮಾತ್ರ ಮರ ಉಳಿಯುತ್ತದೆ ಅನ್ನುವುದನ್ನು ನಾವು ಮರೆಯಬಾರದು. ಅನಂತಕುಮಾರರ ಹಾಗೆ ತೇಜಸ್ವಿನಿಯವರಿಗೂ ಸಮಸ್ಯೆಯನ್ನು ಎದುರಿಸುವ ಧೈರ್ಯವಿದೆ. ಅವರಿಗೆ ತಮ್ಮದೇ ಆದ ಅನುಭವವಿದೆ. ಅವರಿಗೆ ದೊಡ್ಡ ಪಕ್ಷವೊಂದರ ಬೆಂಬಲವಿದೆ. ಅವರ ಜೊತೆ ಜನರಿದ್ದಾರೆ. ದೇವರು ವರವಾಗಲಿ, ಶಾಪವಾಗಲಿ ಕೊಡುವುದಿಲ್ಲ, ಅವಕಾಶವನ್ನು ಮಾತ್ರ ಕೊಟ್ಟಿರುತ್ತಾನೆ. ಅದನ್ನು ಬಳಸಿಕೊಂಡು ಸಮಾಜಸೇವೆಯ ಕೆಲಸವನ್ನು ಅವರು ಮುಂದುವರೆಸಬೇಕು.

ಮಾನ್ಯ ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಲು ಅನಂತಕುಮಾರರು ತಮ್ಮ ಶಕ್ತಿ ಧಾರೆಯೆರೆದಿದ್ದಾರೆ. ಭೂಮಿ ಮಟ್ಟವಾಗಲು ಹೊಲವನ್ನು ಉಳಬೇಕು. ಕಲ್ಲಿಗೆ ಏಟು ಬಿದ್ದರೆ ಮಾತ್ರ ಉತ್ತಮ ಶಿಲ್ಪ ಮೂಡುತ್ತದೆ. ಕಲ್ಲು ಪ್ರಕೃತಿ; ಪೂಜಿಸಿದರೆ ಸಂಸ್ಕೃತಿ. ಅನಂತಕುಮಾರರ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಲು ತೇಜಸ್ವಿನಿಯವರೂ ರಾಜಕೀಯ ರಂಗದಲ್ಲಿ ಕೆಲಸ ಮಾಡಬೇಕು. ಬದುಕಿದ್ದಕ್ಕೆ ಏನಾದರೂ ಒಂದು ಸಾಕ್ಷಿಯನ್ನು ಬಿಟ್ಟು ಹೋಗಬೇಕು ಎಂಬ ಉದ್ದೇಶದಿಂದ ಅದಮ್ಯ ಚೇತನ ಸಂಸ್ಥೆಯನ್ನು ಅನಂತಕುಮಾರ್ ಬಿಟ್ಟು ಹೋಗಿದ್ದಾರೆ. ಅವರ ಈ ರೀತಿಯ ಕೆಲಸ ನಮಗೆಲ್ಲ ಮಾದರಿಯಾಗಬೇಕು.

ಸಸ್ಯಲೋಕ ಪರಿಚಯ ಮಾಲಿಕೆ- 25

# ಚೆಂಡು ಹೂವು



ಹೂವುಗಳಲ್ಲಿ ಪ್ರಮುಖವಾದದ್ದು ಚೆಂಡು ಹೂವು. ಭಾರತದ ದೊಡ್ಡ ದೊಡ್ಡ ಹಬ್ಬಗಳಲ್ಲಿ ಮನೆಯ ಬಾಗಿಲಿಗೆ ಮಾಡುವ ಬಣ್ಣಬಣ್ಣದ ಚೆಂಡು ಹೂವುಗಳ ತೋರಣ ಮನಸೆಳೆಯುತ್ತದೆ. ಮಾರುಕಟ್ಟೆಯಲ್ಲಿ ಈ ಹೂವುಗಳದ್ದೇ ದರ್ಬಾರು.

ಆಸ್ಟಿರೇಸಿ ಕುಟುಂಬಕ್ಕೆ ಸೇರಿದ ಚೆಂಡು ಹೂವಿನ ವೈಜ್ಞಾನಿಕ ಹೆಸರು - ಟಗೆಟಿಸ್ ಇರೆಕ್ಟ್/ಪೇಟುಲ. ಭಾರತದ ಮಧ್ಯಪ್ರದೇಶ, ಕರ್ನಾಟಕ, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಬೆಳೆಯಲಾಗುತ್ತಿರುವ ಈ ಹೂವಿನ ಮೂಲ ಮೆಕ್ಸಿಕೋ ಎಂದು ಹೇಳಲಾಗುತ್ತಿದೆ. ಇದು ಬ್ರಿಟಿಷರ ಆಳ್ವಿಕೆಯಲ್ಲಿ ಭಾರತಕ್ಕೆ ಬಂದಿತು ಎಂದು ಪ್ರಸಿದ್ಧ ಸಸ್ಯವಿಜ್ಞಾನಿ ಡಾ. ಬಿ.ಜಿ.ಎಲ್. ಸ್ವಾಮಿ ಅಭಿಪ್ರಾಯಪಡುತ್ತಾರೆ.

**ಸಸ್ಯ ವಿವರ:** ಪೊದೆಯಾಗಿ, ಗುಂಪಾಗಿ ಬೆಳೆಯುವ ಈ ಹೂವಿನ ಗಿಡದ ಎಲೆಗಳು ಸೀಳಿರುತ್ತವೆ. ಆದರೂ, ಸಂಯುಕ್ತ ರೂಪದಲ್ಲಿ ಕಾಣುತ್ತವೆ. ಸುಮಾರು 1.50 ಸೆ.ಮೀ. ಉದ್ದದ ಈ ಎಲೆಗಳಿಗೆ ವಾಸನೆ ಇರುತ್ತದೆ. ಹಳದಿ, ಕಿತ್ತಳೆ ಬಣ್ಣದಲ್ಲಿದ್ದು, ಸಾಧಾರಣವಾಗಿ 4 ರಿಂದ 6 ಸೆ.ಮೀ ಅಗಲದ ಪುಷ್ಪಮಂಜರಿಯಲ್ಲಿ ಒತ್ತಾಗಿ ಜೋಡಣೆಯಾಗಿರುತ್ತವೆ.

ಒಣಗಿದ ಚೆಂಡುಹೂಗಳನ್ನು ಬಿಡಿಸಿ ಭೂಮಿಯಲ್ಲಿ ಮಡಿ ಮಾಡಿ, ಬೀಜ ಬಿತ್ತನೆ ಮಾಡಿ, ಅದರ ಮೇಲೆ ತೆಳುವಾಗಿ ಕೊಟ್ಟಿಗೆ ಗೊಬ್ಬರ ಹಾಕಿ ನಿಯಮಿತವಾಗಿ ನೀರು ಒದಗಿಸಿದರೆ, ನಾಲ್ಕು ವಾರಗಳಲ್ಲಿ ಸಸಿಗಳು ನಾಟಿಗೆ ಬರುತ್ತವೆ. ಇತರ ಬೆಳೆಗಳ ಬದುಗಳಲ್ಲಿ ಈ ಗಿಡಗಳನ್ನು ಬೆಳೆಸುವುದರಿಂದ ಹಲವಾರು ಪರೋಪಕಾರಿ ಕೀಟಗಳನ್ನು ಆಕರ್ಷಿಸಿ, ಬೆಳೆಗಳ ಇಳುವರಿ ಹೆಚ್ಚಿಸುತ್ತದೆ. ತನ್ನ ಬೇರುಗಳಿಂದ ಒಂದು ಪದಾರ್ಥವನ್ನು ಸ್ರವಿಸಿ ಮುಖ್ಯ ಬೆಳೆಗಳನ್ನು ಕಾಡುವ ಬೇರು ಹುಳುಗಳನ್ನು ಕೊಲ್ಲುತ್ತದೆ.

**ಚೆಂಡು ಹೂವು, ಎಲೆಗಳ ಔಷಧೀಯ ಗುಣ:** ಹೂವಿನಲ್ಲಿಯ ಆಂಟಿ ಆಕ್ಸಿಡೆಂಟ್, ಕ್ಯಾನ್ಸರ್ ಹಾಗೂ ಇತರ ರೋಗಗಳಿಂದ ರಕ್ಷಣೆ ನೀಡುತ್ತದೆ. ಹೂವಿನ ದಳ ಹಾಗೂ ಎಲೆಗಳ ರಸ ಕುಡಿದರೆ ರಕ್ತ ಶುದ್ಧಿಯಾಗುತ್ತದೆ. ದಳಗಳ ರಸ ಸಂಗ್ರಹಿಸಿಟ್ಟು, ಹಚ್ಚುತ್ತಿದ್ದರೆ ಕೂದಲ ಆರೋಗ್ಯಕ್ಕೆ ಒಳ್ಳೆಯದು.

ವಿವಿಧ ಬಣ್ಣ ತಯಾರಿಕೆಯಲ್ಲೂ ಬಳಸುತ್ತಾರೆ. ಈ ಹೂವಿನಲ್ಲಿ ಲ್ಯುಟಿನ್ ಎಂಬ ವರ್ಣದ್ರವ್ಯವಿದ್ದು, ಇದನ್ನು ಕೋಳಿಗಳಿಗೆ ನೀಡುವುದರಿಂದ ಮೊಟ್ಟೆಯ ಹಳದಿಲೋಳೆಯ ಬಣ್ಣ ಹೆಚ್ಚುತ್ತದೆ. ಕೋಳಿಗಳನ್ನು ಹಲವು ವಯೋಸಹಜ ಕಾಯಿಲೆಗಳಿಂದ ರಕ್ಷಿಸುತ್ತದೆ. ಹೂವುಗಳನ್ನು ಚರ್ಮರೋಗ ಹಾಗೂ ಅಲ್ಸರ್ ಚಿಕಿತ್ಸೆಗೆ ಬಳಸುತ್ತಾರೆ. ನಾಯಿ, ಬೆಕ್ಕುಗಳ ಕಿವಿ/ ಕಾಲಿನ ರೋಗಗಳಿಗೂ ಗಿಡದ ಎಲೆಗಳನ್ನು ಔಷಧವಾಗಿ ಬಳಸುತ್ತಾರೆ. ಆಹಾರ ಪದಾರ್ಥಗಳ ಆಕರ್ಷಣೆ ಹೆಚ್ಚಿಸಿ, ವಸ್ತುವಿನ ಮೌಲ್ಯವರ್ಧನೆಗೂ ಹೂವುಗಳಿಂದ ಸಂಸ್ಕರಿಸಿದ ಬಣ್ಣವನ್ನು ಬಳಸುತ್ತಾರೆ.

ಚೆಂಡು ಹೂವಿನಿಂದ ಎಣ್ಣೆಯನ್ನು ಸಂಸ್ಕರಿಸಿ, ಅದನ್ನು ಗಂಧದ ಎಣ್ಣೆ ಜೊತೆಗೆ ಸೇರಿಸಿ, ಸುಗಂಧ ದ್ರವ್ಯವನ್ನು ಸಹ ತಯಾರಿಸಲಾಗುತ್ತಿದೆ. ಇದರ ಎಲೆ ಹಾಗೂ ದಳಗಳನ್ನು ಪೇಯಗಳ ತಯಾರಿಕೆಯಲ್ಲೂ ಬಳಸುತ್ತಾರೆ.



● ಛಾಯಾ ಓಕ್ ಬಾಪಟ್

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಹಸಿರು ಭಾನುವಾರದ ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳ ಸಂಖ್ಯೆ |
|---|---|---|---|
| 403 17/09/23 | ಎನ್. ಜಿ. ಇ. ಎಫ್. ಲೇಔಟ್ ಆವರಣ | ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಜನ್ಮದಿನದ ಪ್ರಯುಕ್ತ ನಡೆದ ಸ್ವಚ್ಛ ಭಾರತ ಅಭಿಯಾನ- ಯುತ್ ಫಾರ್ ಸೇವಾ ಸಂಸ್ಥೆ, ಸೊಸೈಟಿ ಜನರಾಲ್, BMS ಕಾಲೇಜ್ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಹಸಿರುಪಡೆಯ ಜೊತೆಗೆ, ಸಂಸ್ಥೆಯ ಸ್ವಯಂ ಸೇವಕರು. | 20 ಗಿಡಗಳು |
| 404 24/09/23 | ಬೆಂ. ವಿ. ವಿ. ಆವರಣದಲ್ಲಿರುವ ಎನ್. ಎಸ್. ಎಸ್ ಭವನದ ಬಳಿ | ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ವೋಲ್ವೊ ಇಂಡಸ್ಟ್ರಿ ಹಾಗೂ ಫ್ರಾನ್ಸ್ ಮೂಲದ ಬ್ಯಾಂಕ್ ಸೊಸೈಟಿ ಜನರಾಲ್ ಸಿಬ್ಬಂದಿ, ವಿವಿಧ ಕಾಲೇಜು ವಿದ್ಯಾರ್ಥಿಗಳು. | 64 ಗಿಡಗಳು |
| 405 01/10/23 | ಆನೇಕಲ್ - ಸರ್ಜಾಪುರ ರಸ್ತೆಯ ಮುತ್ತಾನಲ್ಲೂರು ಗ್ರಾಮ ವ್ಯಾಪ್ತಿಯ ದೇವರಕೆರೆಯ ದಡ | ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ನಾನಾ ಕಾಲೇಜಿನ ವಿದ್ಯಾರ್ಥಿಗಳು, ಸ್ಥಳೀಯರು, ಸಂಸ್ಥೆಯ ಸಿಬ್ಬಂದಿ, ಸ್ವಯಂ ಸೇವಾ ಕಾರ್ಯಕರ್ತರು. | 100 ಗಿಡಗಳು |
| 406 08/10/23 | ಬೆಂಗಳೂರಿನ ಅಂಜನಾಪುರ- ಅವಲಹಳ್ಳಿ ಕೆರೆಯ ದಡ | ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶಾಸಕ ಕೃಷ್ಣಪ್ಪ, ಕಾರ್ಪೋರೇಟರ್ ಸೋಮಶೇಖರ್, ಬಿಜೆಪಿ ಕಾರ್ಯಕರ್ತರು, ಗುರುಕುಲ ಅಕಾಡೆಮಿಯ ವಿನುತಾ, ಇಂಟರ್ ನ್ಯಾಷನಲ್ ಹೆಲ್ತ್ ಸಂಸ್ಥೆಯ ಪಾಲ್, ಸ್ಟೀಫನ್, ಉಲ್ಲಾಸ್ ಕೋಟೆಗಾರ್ ಸೇರಿದಂತೆ ಸಿಗ್ನಾ ಸಂಸ್ಥೆಯ ಸಿಬ್ಬಂದಿ, ಕನಕಪುರದ ಆದರ್ಶ ಕಿಡ್ಸ್ ಶಾಲೆಯ ವಿದ್ಯಾರ್ಥಿಗಳು, ಯುಥ್ ಫಾರ್ ಸೇವಾ ಕಾರ್ಯಕರ್ತರು, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು, ಸೊಸೈಟಿ ಜನರಾಲ್, ನಂದಿ ಗಾರ್ಡನ್ ಅಪಾರ್ಟ್ ಮೆಂಟ್‌ನ ನಿವಾಸಿಗಳು. | 60 ಗಿಡಗಳು |

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೇ ತಾರೀಕು ತಪ್ಪದೇ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ.
ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: 8884182415

# 'ರಾಜಕೀಯಕ್ಕೆ ಮೀರಿದ ಸ್ನೇಹ'



**ಬಿ.ಎಸ್. ಯಡಿಯೂರಪ್ಪ**
ಮಾಜಿ ಮುಖ್ಯಮಂತ್ರಿ, ಕರ್ನಾಟಕ

ಅನಂತಕುಮಾರ್ ಜೊತೆ ನನ್ನ ಸ್ನೇಹ ರಾಜಕೀಯಕ್ಕೂ ಮೀರಿದ್ದು. ಲೋಕಸಭೆಯ ಮಾಜಿ ಉಪಸಭಾಪತಿ, ಮಲ್ಲಿಕಾರ್ಜುನಯ್ಯನವರ ಮನೆಯಲ್ಲಿ ನಾನು, ಅನಂತಕುಮಾರ್ ಮತ್ತು ತೇಜಸ್ವಿನಿ ಅನಂತಕುಮಾರ್ ವರ್ಷಗಟ್ಟಲೆ ವಾಸ ಮಾಡಿದ್ದೆವು. ಪ್ರತಿದಿನ ಬೆಳಗ್ಗೆ 6:00 ಗಂಟೆಗೆ ವಾಕಿಂಗ್ ಹೊರಟಾಗ ನಾನು ಮತ್ತು ಅನಂತಕುಮಾರ್ ಮುಂದಿನ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ನಮ್ಮ ನಿರ್ಧಾರಗಳನ್ನು ತತ್‌ಕ್ಷಣವೇ ಕಾರ್ಯರೂಪಕ್ಕೆ ತರುತ್ತಿದ್ದೆವು. ಪಕ್ಷವು ಇಂದಿನ ಮಟ್ಟಕ್ಕೆ ಬೆಳೆದು ನಿಂತಿದ್ದರೆ ಅದರ ಹಿಂದೆ ಅನಂತಕುಮಾರರ ಶ್ರಮವಿದೆ. ನನ್ನನ್ನೂ ಸೇರಿದಂತೆ ಪಕ್ಷದ ಅನೇಕ ಮುಖಂಡರನ್ನು ಹಾಗೂ ಕಾರ್ಯಕರ್ತರನ್ನು ಅವರು ಬೆಳೆಸಿದ್ದಾರೆ. ರಾಜ್ಯದ ಅಭಿವೃದ್ಧಿಗೂ ಕೂಡ ಅವರ ಕೊಡುಗೆ ಅಪಾರವಾಗಿದೆ. ಅವರು ಪಾರ್ಲಿಮೆಂಟರಿ ವ್ಯವಹಾರಗಳ ಸಚಿವರಾಗಿದ್ದಾಗ, ರಾಜ್ಯದ ಯಾವುದೇ ಮುಖಂಡರು ದೆಹಲಿಗೆ ಹೋದಾಗ, ಸಂಬಂಧಪಟ್ಟ ಸಚಿವರನ್ನು ತಮ್ಮ ಕಚೇರಿಗೆ ಕರೆಯಿಸಿ ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸುತ್ತಿದ್ದರು. ಇಂದಿನ ಕಷ್ಟದ ಪರಿಸ್ಥಿತಿಯಲ್ಲಿ ಇಂತಹ ಆತ್ಮೀಯ ಸ್ನೇಹಿತ ಅನಂತಕುಮಾರ್ ನಮ್ಮ ಜೊತೆಗೆ ಇದ್ದು ನಮಗೆ ಮಾರ್ಗದರ್ಶನ ಮಾಡಬೇಕಿತ್ತು. ತೇಜಸ್ವಿನಿ ಅನಂತಕುಮಾರರು ಈ ಪ್ರತಿಷ್ಠಾನದ ಮೂಲಕ ಅನಂತಕುಮಾರರ ಆದರ್ಶಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಅಜಾತಶತ್ರು ಅನಂತಕುಮಾರರ ನೆನಪುಗಳನ್ನು ಚಿರಸ್ಥಾಯಿಯಾಗಿಸಿದ್ದಾರೆ.

# 'ಕ್ಲಾಸ್‌ಮೇಟ್ ಅಲ್ಲ ಬೆಂಚ್‌ಮೇಟ್'

ಅನಂತಕುಮಾರ್- ಅವರ ಹೆಸರೇ ಹೇಳುವಂತೆ ಅನಂತ ಸಾಧನೆಯನ್ನು ಅತ್ಯಂತ ಅಲ್ಪ ಜೀವನಕಾಲದಲ್ಲಿ ಮಾಡಿ ಸಾಧಕರಾದವರು. ನಾನು ಮತ್ತು ಅನಂತಕುಮಾರ್ ಒಂದೇ ತರಗತಿಯಲ್ಲಿ ಓದಿದವರು. ನಾನು ಅವರನ್ನು ಕ್ಲಾಸ್ ಮೇಟ್ ಎಂದು ಕರೆದರೆ ಅವರು "ನಾನು ಕ್ಲಾಸ್‌ಮೇಟ್ ಅಲ್ಲ; ಬೆಂಚ್‌ಮೇಟ್" ಎಂದು ತಿದ್ದುಪಡಿ ಮಾಡುತ್ತಿದ್ದರು. ತಾವು ಬಹಳ ದೂರದೃಷ್ಟಿ ಇರುವ ನಾಯಕ ಎಂಬುದನ್ನು ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ನಿರೂಪಿಸಿದ್ದರು. ಒಂದು ದಿವಸ ಹೀಗೆ ಸಂಜೆ ಚಹಾ ಕುಡಿಯುತ್ತಾ ಕುಳಿತಿದ್ದಾಗ 'ಏ ಬಸವರಾಜ, ಎಲ್ಲ ಕಡೆ ಎಮರ್ಜೆನ್ಸಿ ವಿರುದ್ಧ ಹೋರಾಟ ಆಗ್ತೈತಿ, ಹುಬ್ಬಳ್ಳಿಯೊಳಗ ಆಗಿಲ್ಲ ನಾವೂ ಹೋರಾಟ ಮಾಡಬೇಕು' ಎಂದರು. ಮುಂದೆ ಒಂದೇ ವಾರದಲ್ಲಿ ಒಂದು ಸಮಿತಿ ಮಾಡಿ, ಅದಕ್ಕೆ ಅವರನ್ನೇ ಸೆಕ್ರೆಟರಿಯನ್ನಾಗಿ ಆಯ್ಕೆ ಮಾಡಿ, ಪ್ರಥಮ ಬಾರಿ ಎಮರ್ಜೆನ್ಸಿಯ ಕಾಲದಲ್ಲಿ ಹೋರಾಟವನ್ನು ಮಾಡಿದೆವು. ಅನಂತಕುಮಾರರು ಅರೆಸ್ಟ್ ಆಗಿ ಜೈಲಿಗೆ ಹೋದರು. ಅವರು ಮನಸ್ಸು ಮಾಡಿದರೆ ಅವತ್ತು ಅರೆಸ್ಟ್ ಆಗ್ತಿರಲಿಲ್ಲ. ಆದರೆ ಅವರು ಹೋರಾಟದ ಹುರುಪಿನಲ್ಲಿ ಇದ್ದರು. ಒಂದು ವರ್ಷ ವಿದ್ಯಾಭ್ಯಾಸವೂ ಹಾಳಾಯಿತು. ಆದರೆ ಉತ್ಸಾಹ ಮಾತ್ರ ಏನೂ ಕಡಿಮೆಯಾಗಿರಲಿಲ್ಲ. ಅವರ ವಿಚಾರಗಳ ಪ್ರಖರತೆಯೂ ಕಡಿಮೆಯಾಗಿರಲಿಲ್ಲ.



**ಬಸವರಾಜ ಬೊಮ್ಮಾಯಿ**
ಮಾಜಿ ಮುಖ್ಯಮಂತ್ರಿ, ಕರ್ನಾಟಕ

ಅನಂತಕುಮಾರರು ಕರ್ನಾಟಕದ ಆಪದ್ಬಾಂಧವ. ರಾಜ್ಯದ ಯಾವುದೇ ವಿಚಾರ ಕೇಂದ್ರದಲ್ಲಿದ್ದರೆ ನಾವು ನಿಶ್ಚಿಂತೆಯಿಂದ ಅನಂತಕುಮಾರ್ ಮೇಲೆ ಜವಾಬ್ದಾರಿಯನ್ನು ಹೊರಿಸಿಬಿಡುತ್ತಿದ್ದೆವು. ತೀರಾ ಇತ್ತೀಚೆಗೆ ಕೂಡ ದೆಹಲಿಯಲ್ಲಿ ನಡೆದ ಕಾವೇರಿ ವಿಚಾರದ ಸಭೆಯಲ್ಲಿ ಅನಂತಕುಮಾರ್ ಅವರ ಅನುಪಸ್ಥಿತಿ ನಮ್ಮನ್ನು ಕಾಡುತ್ತಿತ್ತು. ಇಂತಹ ಕಠಿಣ ಸಂದರ್ಭದಲ್ಲಿ ಕರ್ನಾಟಕದ ಹಿತಾಸಕ್ತಿ ಕಾಪಾಡಲು ಅವರು ಇರಬೇಕಾಗಿತ್ತು ಎಂಬುದು ಎಲ್ಲರ ಒಮ್ಮತದ ಅಭಿಪ್ರಾಯವಾಗಿತ್ತು. ಕೃಷ್ಣಾ ಜಲವಿವಾದದ ವಿಷಯದಲ್ಲಿ ಕರ್ನಾಟಕವು ದೊಡ್ಡ ಗಂಡಾಂತರವನ್ನು ಎದುರಿಸುತ್ತಿತ್ತು. ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳು ಅದುವರೆಗಿನ ನ್ಯಾಯಾಧಿಕರಣಗಳ ಆದೇಶಗಳನ್ನು ರದ್ದುಗೊಳಿಸಿ ಹೊಸ ನ್ಯಾಯಾಧಿಕರಣದ ಸ್ಥಾಪನೆಗೆ ಒತ್ತಾಯ ಹೇರಿ ಬಹುತೇಕ ಯಶಸ್ವಿಯೂ ಆಗಿದ್ದವು. ನಮ್ಮ ಪಾಲಿಗೆ ವಿತರಣೆಯಾಗಿದ್ದ 900 ಟಿಎಂಸಿ ನೀರನ್ನು ಕೂಡ ಕಳೆದುಕೊಳ್ಳುವ ಸಂಭವ ಎದುರಾಗಿತ್ತು. ರಾಜ್ಯದಲ್ಲಿ ನಾವು ವಿರೋಧ ಪಕ್ಷದಲ್ಲಿದ್ದೆವು. ಕೇಂದ್ರದಲ್ಲಿ ನಮ್ಮ ಸರ್ಕಾರ ಅದೇ ತಾನೇ ರಚನೆಯಾಗಿತ್ತು. ನಾನು ಅನಂತಕುಮಾರ್ ಅವರಿಗೆ ಸಮಸ್ಯೆಯನ್ನು ವಿವರಿಸಿ ಫೋನ್‌ಮಾಡಿದೆ. ಕೇಂದ್ರದ ನೀರಾವರಿ ಇಲಾಖೆಯ ಸೆಕ್ರೆಟರಿ ಹತ್ತಿರ ಮಾತಾಡಿದಾಗ ಅವರು ಸಹಕರಿಸಲಿಲ್ಲ. ಆಗ ಅನಂತಕುಮಾರ್ ಒಂದೇ ಮಾತು ಹೇಳಿದರು – "ಈಗ ಮಾಡಿರುವ ತೀರ್ಮಾನ ಸರಿ ಇಲ್ಲ, ಇದನ್ನು ಹಿಂತೆದುಕೊಳ್ಳಬೇಕು. ನಾಳೆ ಬೆಳಗ್ಗೆ 9ಕ್ಕೆ ಹೊಸ ಲಾ ಸೆಕ್ರೆಟರಿ ಬಂದು ಸೈನ್‌ಮಾಡುತ್ತಾರೆ, ನೀವು ಹೋಗಿ'' ಅಂದರು. ಅನಂತಕುಮಾರರ ದೃಢವಾದ ಮಾತುಗಳನ್ನು ಕೇಳಿ ಮರುಮಾತಾಡದೆ ಆದೇಶಗಳಿಗೆ ರುಜು ಹಾಕಿದರು. ಈ ರೀತಿಯಾಗಿ, ಕರ್ನಾಟಕದ ಕೃಷ್ಣಾ ಜಲಾನಯನ ಪ್ರದೇಶದ ನಮ್ಮ ನೀರಿನ ಹಕ್ಕನ್ನು ಅವತ್ತು ಉಳಿಸಿದವರು, ಅನಂತಕುಮಾರ್.

ನಾನು ಮೊದಲು ಬೇರೆ ಪಕ್ಷದಲ್ಲಿದ್ದೆ. ಆದರೂ, ನನಗೆ 'ದೋಸ್ತ, ದೋಸ್ತ' ಅನ್ನುತ್ತಿದ್ದರು, ಅನಂತಕುಮಾರ್. "ದೋಸ್ತಾ, ನಾವು ನೀವು ಕೂಡಿ ಯಾವಾಗ ಒಂದೇ ಕೆಲಸ ಮಾಡುವುದು?" ಎನ್ನುತ್ತಿದ್ದರು. ನಾನು "ಮಾಡ್ತಾ ಇದ್ದೀವಲ್ಲ" ಎನ್ನುತ್ತಿದ್ದೆ. ಈ ರೀತಿಯಾಗಿ ಅವರು ಸುಮಾರು 7 ವರ್ಷ ನನಗೆ ಗಂಟು ಬಿದ್ದಿದ್ದರು. ಆಮೇಲೆ ಕಾಲ ಕೂಡಿಬಂತು. ರಾಜನಾಥ ಸಿಂಗ್ ಕರ್ನಾಟಕಕ್ಕೆ ಬಂದಾಗ ನಾನು ಅವರ ಪ್ರೀತಿಯ ಒತ್ತಾಯಕ್ಕೆ ಮಣಿದು ಬಿಜೆಪಿ ಸೇರಿದೆ. ಪಕ್ಷಕ್ಕೆ ಸೇರುವ ಮೊದಲೂ ನಂತರವೂ ನಮ್ಮನ್ನು ಅಷ್ಟೇ ಪ್ರೀತಿ ವಿಶ್ವಾಸಗಳಿಂದ ನೋಡಿಕೊಂಡಿದ್ದರು. "ಸಾಧಕನಿಗೆ ಸಾವು ಅಂತ್ಯವಲ್ಲ, ಅವನು ಸಾವಿನ ನಂತರವೂ ಬದುಕುತ್ತಾನೆ'' ಎಂದು ವಿವೇಕಾನಂದರು ಹೇಳಿದಂತೆ ಸಾವಿನ ನಂತರವೂ ಅನಂತಕುಮಾರ್ ಬದುಕಿದ್ದಾರೆ. ಅನಂತಕುಮಾರರ ಹೆಸರು ಅನಂತವಾಗಿರಲಿ ಎಂದು ಹಾರೈಸುತ್ತೇನೆ.

# ಮತ್ತೆ ಮತ್ತೆ ನೆನಪಾಗುವ ಅನಂತಕುಮಾರ್



**ಸಿ.ಟಿ.ರವಿ**
ಬಿಜೆಪಿ ಮುಖಂಡರು

ಅನಂತಕುಮಾರರು ನನ್ನ ರಾಜಕೀಯ ಗುರುಗಳು. ಅವರನ್ನು ಜನ್ಮದಿನದ ಪ್ರಯುಕ್ತ 'ಅನಂತ ನಮನ' ಕಾರ್ಯಕ್ರಮದಲ್ಲಿ ಮಾತ್ರವಲ್ಲ, ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತೇವೆ. ಅನಂತಕುಮಾರರು ದೈಹಿಕವಾಗಿ ನಮ್ಮ ಜೊತೆಗಿಲ್ಲ. ಆದರೆ, ಚೇತನವಾಗಿ ನಮ್ಮ ಜೊತೆ-ಗಿದ್ದಾರೆ. ಬೆಂಗಳೂರಿನ ಅಭಿವೃದ್ಧಿಗೆ ಒಂದು ಭೂಮಿಕೆ-ಯನ್ನು ಹಾಕಿಕೊಟ್ಟಿದ್ದು ಕೆಂಪೇಗೌಡರಾದರೆ, ಅದನ್ನು ವಿಸ್ತರಿಸಿದ್ದು ನಮ್ಮ ಅನಂತಕುಮಾರ್. ಮೆಟ್ರೋ ಮೂಲಕ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಅದನ್ನು ವಿಸ್ತರಿಸುವ ಕೆಲಸ ಮಾಡಿ ಸದಾ ಬೆಂಗಳೂರಿನ ಜೊತೆಗಿದ್ದಾರೆ. ಕಾವೇರಿಯ ಹೋರಾಟದ ಕಿಚ್ಚು ರಾಜ್ಯದ ಉದ್ದಗಲಕ್ಕೆ ಹಬ್ಬುತ್ತಿರುವ ಸಂದರ್ಭ-ದಲ್ಲಿ ಅನಂತಕುಮಾರರು ಮತ್ತೆ ಮತ್ತೆ ನೆನಪಾಗುತ್ತಾರೆ. ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಭುಗಿಲೆದ್ದ ಸಮಸ್ಯೆಯನ್ನು ಲೀಲಾಜಾಲವಾಗಿ ಅವರು ಬಗೆಹರಿಸಿದ್ದರು. ಪ್ರತೀ ವರ್ಷ ಅವರಿಗೆ ಹಲವಾರು ಜನ ಕೊಡುತ್ತಿದ್ದ ಡೈರಿಗಳಲ್ಲಿ ಒಂದರ ಮೇಲೆ ನುಡಿಮುತ್ತುಗಳನ್ನು ತಮ್ಮ ಹಸ್ತಾಕ್ಷರದಲ್ಲಿ ಬರೆದು ನನಗೆ ಕೊ-ಡುತ್ತಿದ್ದರು. ಒಂದು ವರ್ಷದ ಡೈರಿಯಲ್ಲಿ 'ಜೀವನ ಒಂದು ಕತ್ತೆ, ಅದನ್ನು ಚೆನ್ನಾಗಿ ದುಡಿಸು' ಎಂಬ ಘೋಷವಾಕ್ಯವನ್ನು ಬರೆದು ಅ.ಕು. ಎಂದು ಸಹಿಮಾಡಿದ್ದರು. ಇನ್ನೊಮ್ಮೆ 'ಇಷ್ಟೇ ಎಂಬುದು ಕಣ್ಣೀರು ಹಾಕುವ ಅವಶ್ಯಕತೆಯಲ್ಲ (ವಿಚಾರವಲ್ಲ); ಜೀವನದ ಜೀವಾಳ. ರಾಷ್ಟ್ರನಿಷ್ಠೆ ಶ್ರೇಷ್ಠವಾದದ್ದು' ಅಂತ ಬರೆದಿದ್ದರು. ಬಹಳ ಜನರು, ತಾವು ಬಯಸಿದ್ದು ಸಿಗದೆ ನಿರಾಶರಾದಾಗ ಅವರಿಗಾಗಿ 'ಕಡು ದಡ್ಡನಾದರೂ ಇಲ್ಲ, ಕಡು ಜಾಣನಾದರೂ ಇಲ್ಲ, ಕಳವಳಿಸಿದರೂ ಇಲ್ಲ, ಸೃಷ್ಟೀಶ, ಜಗದೀಶ ಕಾಗಿನೆಲೆಯಾದಿಕೇಶವ ಕೊಟ್ಟರೆ ಉಂಟು, ಕೊಡದಿದ್ದರೆ ಇಲ್ಲ' ಅಂತ ಒಂದು ಡೈಲಾಗ್ ಹೊಡೆಯುವವರು. 'ಬಾರದು ಬಪ್ಪದು ಬಪ್ಪುದು ತಪ್ಪದು' ಎಂಬುದು ಅವರ ಇನ್ನೊಂದು ಪ್ರಸಿದ್ಧ ಡೈಲಾಗ್. ನನ್ನಂತಹ ಹಲವಾರು ಜನರನ್ನು ಅವರು ಬೆಳೆಸಿದ್ದಾರೆ. ಅವರು ಇವತ್ತು ಇಲ್ಲದೇ ಇದ್ದರೂ ಕೂಡ ಅವರು ಬೆಳೆಸಿದ ರಾಜಕೀಯ ನೇತೃತ್ವ ಕ್ರಿಯಾಶೀಲವಾಗಿದೆ. ಅನಂತಕುಮಾರರು ತನಗೆ ಕೊಟ್ಟ ಜವಾಬ್ದಾರಿಯನ್ನು ಎಷ್ಟು ಚೆನ್ನಾಗಿ ಮಾಡಬಲ್ಲವರು ಎಂಬುದಕ್ಕೆ ಅವರು ನಿರ್ವಹಿಸಿದ ಖಾತೆಗಳೇ ನಿದರ್ಶನ. ನಗರಾಭಿವೃದ್ಧಿ ಇಲಾಖೆ, ವಸತಿ ಇಲಾಖೆಗಳಂತಹ ಹಲವು ಪ್ರಮುಖ ಖಾತೆಗಳನ್ನು ಅವರು ನಿರ್ವಹಿಸಿದರು. ಅವರಿಗೆ ರಸಗೊಬ್ಬರ ಖಾತೆ ಕೊಟ್ಟಾಗ, ಒಂದು ಪತ್ರಿಕೆ 'ಅನಂತಕುಮಾರರಿಗೆ ಗೊಬ್ಬರ' ಅಂತ ಬರೆದಿತ್ತು. ಆದರೆ ಬೇವುಲೇಪಿತ ಯೂರಿಯಾವನ್ನು ಕೊಡುವುದರ ಮೂಲಕ ಗೊಬ್ಬರದ ಖಾತೆಗೂ ಕೂಡ ಮಹತ್ವ ಬರುವಂತೆ ಮಾಡಿದರು. ಈ ರೀತಿಯಾಗಿ, ಅವರು ದೈಹಿಕವಾಗಿ ನಮ್ಮ ಜೊತೆಗಿಲ್ಲದಿದ್ದರೂ ಚೇತನವಾಗಿ ನಮ್ಮ ಜೊತೆಗಿದ್ದಾರೆ. ಅವರಿಗೆ ಅನಂತ ನಮನಗಳು.

# ಅದಮ್ಯಚೇತನ ತಿಂಗಳ ವರದಿ (15 ಸೆಪ್ಟೆಂಬರ್ 2023 ರಿಂದ 15 ಅಕ್ಟೋಬರ್ 2023)

**ತೇಜಸ್ವಿನಿ ಅನಂತಕುಮಾರರಿಗೆ 'ಅಸಾಮಾನ್ಯ ಕನ್ನಡಿಗ' ಪ್ರಶಸ್ತಿ:** ಯಾವುದೇ ಸುದ್ದಿ-ಪುರಸ್ಕಾರಗಳ ಹಂಗಿಲ್ಲದೆ, ಗುರುತು-ಗೌರವ ಬಯಸದೆ, ಫಲಾಪೇಕ್ಷೆಯಿಲ್ಲದೆ, ತಾವಾಯಿತು ತಮ್ಮ ಗುರಿಯಾಯಿತು ಎಂಬಂತೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಅದ್ವಿತೀಯ ಸೇವೆ ಸಲ್ಲಿಸಿದ ತೆರೆಮರೆಯ ಸಾಧಕ ಕನ್ನಡಿಗರನ್ನು ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣನ್ಯೂಸ್ ಸುದ್ದಿವಾಹಿನಿ 'ಅಸಾಮಾನ್ಯ ಕನ್ನಡಿಗ' ಪ್ರಶಸ್ತಿ ನೀಡಿ ಸಮ್ಮಾನಿಸುತ್ತ ಬಂದಿದೆ. ಈ ವರ್ಷದ ಪ್ರಶಸ್ತಿಯನ್ನು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಅಕ್ಟೋಬರ್ 13ರಂದು ಪ್ರದಾನ ಮಾಡಲಾಯಿತು.

"ತೇಜಸ್ವಿನಿ ಅನಂತಕುಮಾರರು ಸರಳತೆ, ಪ್ರತಿಭೆ, ಸಂಘಟನಾ ಸಾಮರ್ಥ್ಯ, ಪಕ್ಷನಿಷ್ಠೆ, ಸಮಾಜಸೇವೆಯ ಮೂಲಕ ಜನಮನ್ನಣೆ ಗಳಿಸಿದ್ದಾರೆ. ಮಾತಿಗಿಂತ ಕೆಲಸದ ಮೂಲಕವೇ ಸೈ ಅನಿಸಿಕೊಂಡವರು. 1993ರಲ್ಲಿ ತೇಜಸ್ ಯೋಜನೆಯಲ್ಲಿ ವಿಜ್ಞಾನಿಯಾಗಿದ್ದ ಹಿರಿಮೆ ಇವರದು. ಸಮಾಜ ಸೇವೆಗಾಗಿ 'ಅದಮ್ಯ ಚೇತನ' ಸ್ಥಾಪಿಸಿದರು. ಸರ್ಕಾರಿ ಶಾಲೆಯ 2 ಲಕ್ಷ ಮಕ್ಕಳಿಗೆ ನಿತ್ಯವೂ ಬಿಸಿಯೂಟ ಒದಗಿಸುತ್ತಿದ್ದಾರೆ. ಇವರಿಗೆ ರಾಣಿ ಚೆನ್ನಮ್ಮ ವಿವಿ ಗೌರವ ಡಾಕ್ಟರೇಟ್ ನೀಡಿದೆ" ಎಂದು ಈ ಸಂದರ್ಭದಲ್ಲಿ ಕನ್ನಡ ಪ್ರಭ ವರದಿ ಮಾಡಿದೆ. ಶ್ರೀಮತಿ ತೇಜಸ್ವಿನಿಯವರ ಜೊತೆಗೆ ಹಿರಿಯ ಸಾಹಿತಿ, ಶ್ರೀ ಎಚ್ ಎಸ್ ವೆಂಕಟೇಶ ಮೂರ್ತಿ, ಪ್ರಸಿದ್ಧ ಗಾಯಕ ಡಾ. ವಿದ್ಯಾ ಭೂಷಣ, ಸೌರ ವಿಜ್ಞಾನಿ ಡಾ ಹರೀಶ್ ಹಂದೆಯವರೂ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಹಿರಿಯ ಪತ್ರಕರ್ತ, ಶ್ರೀ ನಾಗೇಶ ಹೆಗಡೆ, ಹಿರಿಯ ಸಾಹಿತಿ, ಶ್ರೀ ಬಿ ಆರ್ ಲಕ್ಷ್ಮಣ ರಾವ್ ಮತ್ತು ನಟಿ ಹಾಗೂ ನಿರ್ದೇಶಕಿ ಶ್ರೀಮತಿ ರೂಪಾ ಅಯ್ಯರ್ ಆಯ್ಕೆ ಸಮಿತಿಯ ಸದಸ್ಯರಾಗಿದ್ದರು.

**ಅನಂತಕುಮಾರ್ ಜನ್ಮದಿನದ ಆಚರಣೆ:** ಸೆಪ್ಟೆಂಬರ್ 22ರಂದು ಅನಂತಕುಮಾರ್ ಜನ್ಮದಿನ. ಅನಂತಕುಮಾರರ ಒಡನಾಟ, ಅವರ ಸಾಧನೆಗಳು, ಅವರ ಕರ್ತೃತ್ವಶಕ್ತಿ, ಆದರ್ಶ ವ್ಯಕ್ತಿತ್ವಗಳನ್ನು ಸ್ಮರಿಸಿಕೊಂಡು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುವ ಸಂಕಲ್ಪದಿಂದ ಎರಡು ದಿನಗಳ ಕಾಲ ಹಲವಾರು ಕಾರ್ಯಕ್ರಮಗಳನ್ನು ಗವಿಪುರದ ಮಗಜಿ ಧೋಂಡುಸಾ ಕಲ್ಯಾಣ ಮಂದಿರದಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಅನಂತಪಥ ಮಾಸ ಪತ್ರಿಕೆಯ 39ನೇ ಸಂಚಿಕೆ ಬಿಡುಗಡೆಯಾಯಿತು. ಜೊತೆಗೆ ಅನಂತಕುಮಾರರ ಬಗ್ಗೆ ಅವರ ಒಡನಾಡಿಗಳು ಬರೆದ ಶ್ರದ್ಧಾಂಜಲಿ ಸ್ವರೂಪದ ನೆನಕೆಗಳನ್ನೊಳಗೊಂಡ ಅನಂತನಮನ ಪುಸ್ತಕ ಮತ್ತು ರಾಜ್ಯದ ಪುರಾತನ ದೇವಾಲಯಗಳ ಕಿರುಮಾಹಿತಿಯನ್ನು ನೀಡುವ 64 ಬುಕ್‌ಮಾರ್ಕ್‌ಗಳನ್ನೂ ಬಿಡುಗಡೆಗೊಳಿಸಲಾಯಿತು. ಹಸಿರು ಭಾನುವಾರಗಳ ಚಿತ್ರಸಂಪುಟದ ಬಿಡುಗಡೆ, ವಿವಿಧ ಮನರಂಜನಾ ಕಾರ್ಯಕ್ರಮಗಳು, ವಿವಿಧ ಪ್ರದರ್ಶಿನಿಗಳು, ಪ್ರತಿಭಾ ಪುರಸ್ಕಾರ ಮುಂತಾದ ವಿವಿಧ ಕಾರ್ಯಕ್ರಮಗಳಲ್ಲಿ ಅನಂತಕುಮಾರರ ಅಭಿಮಾನಿಗಳು, ಹಿತೈಷಿಗಳು, ಬಂಧುಗಳು ಮತ್ತು ವಿವಿಧ ಕ್ಷೇತ್ರಗಳ ಹಿರಿಯರು ಉತ್ಸಾಹದಿಂದ ಭಾಗವಹಿಸಿದ್ದರು.

ದಿನಾಂಕ 22ರಂದು ಅದಮ್ಯ ಚೇತನದ ಕಚೇರಿಯಲ್ಲಿ ಗಣಹೋಮ ಮುಂತಾದ ಧಾರ್ಮಿಕ ಕಾರ್ಯಕ್ರಮಗಳೂ ನಡೆದವು.

**'ಸ್ವಚ್ಛತಾ ಹೀ ಸೇವಾ':** ಮಹಾತ್ಮ ಗಾಂಧೀಜಿ ಹಾಗೂ ಭಾರತದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನವನ್ನು ಸ್ವಚ್ಛತೆಯ ಕಡೆಗಮನ ಹರಿಸುವ 'ಸ್ವಚ್ಛತಾ ಹೀ ಸೇವಾ' ಕಾರ್ಯಕ್ರಮದ ಮೂಲಕ ಆಚರಿಸುವಂತೆ ಪ್ರಧಾನಿ ಶ್ರೀ ನರೇಂದ್ರ ಮೋದಿ ನೀಡಿದ ಕರೆಯ ಮೇರೆಗೆ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ 'ಅನಂತವನ' ಆವರಣದಲ್ಲಿ 2023ರ ಅಕ್ಟೋಬರ್ 2ರಂದು ಸಂಸ್ಥೆಯ ಕಾರ್ಯಕರ್ತರು ಶ್ರಮದಾನ ಮಾಡಿದರು. ಸಂಸ್ಥೆಯ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಿತು.




**ಐಐಇಎಸ್‌ಟಿ ಆಡಳಿತ ಮಂಡಳಿಯ ಸಭೆ:** ಪಶ್ಚಿಮ ಬಂಗಾಲದ ಶಿಬಪುರದ ಭಾರತೀಯ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ ಸಂಸ್ಥೆ (ಐಐಇಎಸ್‌ಟಿ) ಯ ಅಧ್ಯಕ್ಷರಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರರು ಪದಗ್ರಹಣ ಮಾಡಿದ ನಂತರ ಪ್ರಥಮ ಬಾರಿಗೆ ಸೆಪ್ಟೆಂಬರ್ 27ರಂದು ನಡೆದ ಆಡಳಿತಮಂಡಳಿಯ ಸಭೆಯ ಅಧ್ಯಕ್ಷತೆವಹಿಸಿದ್ದರು. ಸಭೆಯಲ್ಲಿ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್‌ಗಳು ಭಾಗವಹಿಸಿದ್ದರು.

**ಗಣ್ಯರ ಭೇಟಿ:** ಅನಂತಕುಮಾರ್ ಜನ್ಮದಿನ ಸಮಾರಂಭದಲ್ಲಿ ಭಾಗವಹಿಸಿದ ಎಲ್ಲ ಗಣ್ಯರೂ ಅನ್ನಪೂರ್ಣ ಅಡುಗೆ ಮನೆಗೆ ಭೇಟಿ ನೀಡಿ ಶೂನ್ಯತ್ಯಾಜ್ಯ ವ್ಯವಸ್ಥೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಕರ್ನಾಟಕದ ವಿಧಾನ ಪರಿಷತ್ ಸದಸ್ಯ ಶ್ರೀ ಅ. ದೇವೇಗೌಡ ಹಾಗೂ ಅವರ ಸಹವರ್ತಿಗಳು, ಭಾರತೀಯ ಮೂಲದ ಲಂಡನ್ ನಿವಾಸಿ ಶ್ರೀಮತಿ ಅವನಿ ಹಾಗೂ ಅವರ ಪತಿ ಪ್ರಕಾಶ್, ಅನ್ನಪೂರ್ಣ ಅಡುಗೆ ಮನೆಯನ್ನು ವೀಕ್ಷಿಸಿ ಸಂಸ್ಥೆಯ ಸೇವಾ ಚಟುವಟಿಕೆಗಳನ್ನು ಪ್ರಶಂಸೆ ಮಾಡಿದ್ದಲ್ಲದೆ ಶಾಲಾ ಮಕ್ಕಳಿಗೆ ಹಾಗೂ ಬಡವರಿಗೆ ಅನ್ನದಾನ ಮಾಡಲು ಆರ್ಥಿಕ ನೆರವು ನೀಡಿ ಪ್ರೋತ್ಸಾಹ ನೀಡಿದರು. ಅಂದು ಶ್ರೀಮತಿ ಅವನಿಯವರ ಜನ್ಮದಿನವೂ ಆಗಿದ್ದುದು ವಿಶೇಷ.

**ಇತರ ಚಟುವಟಿಕೆಗಳು:** ಅದಮ್ಯ ಚೇತನ ಸಂಸ್ಥೆಯು ಭಗವದ್ಗೀತಾ ಪಠಣ, ಶ್ರೀ ಚೇತನ ಸಭೆ, ಶ್ರದ್ಧೆಯ ಶಿಲ್ಪ (ಆಕಾಶವಾಣಿ ಕಾರ್ಯಕ್ರಮ), ದೇಗುಲ ದರ್ಶನ, ನಿತ್ಯ ಅನ್ನದಾನ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ಹಾಗೂ ನಿರಂತರವಾಗಿ ನಡೆಸಿಕೊಂಡು ಬಂದಿದೆ.

## ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Venkatesh Manu**
Inputs: **Poornaprajna / Srikanth K / Sujatha GT**
Photographs: **Gopal TS / Chakrapani Kengeri / Internet Sources / AKP / ACF**
Acknowledgements: **A Devegowda / Aishwarya AnanthKumar / Vijetha AnanthKumar**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ (ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ)







ಕರ್ನಾಟಕ ರಾಜ್ಯಪಾಲ ಥಾವರ್ ಚಂದ್ ಗೆಹಲೋಟ್, ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ, ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಮುಂತಾದವರು ಅದಮ್ಯ ಚೇತನದ 'ಅನ್ನಪೂರ್ಣ' ಅಡುಗೆ ಮನೆಗೆ ಭೇಟಿ ನೀಡಿದ ಸಂದರ್ಭ.



ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಪಶ್ಚಿಮ ಬಂಗಾಲದ ಶಿಬಪುರದ ಭಾರತೀಯ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ ಸಂಸ್ಥೆ (ಐಐಇಎಸ್‌ಟಿ) ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸಭೆಗೆ ಹಾಜರಾದ ಸಂದರ್ಭ (ಸೆ. 27).




ಭಾರತೀಯ ಮೂಲದ ಲಂಡನ್ ನಿವಾಸಿ ಶ್ರೀಮತಿ ಅವನಿ ಯವರು ತಮ್ಮ ಪತಿ, ಪ್ರಕಾಶ್ ಅವರ ಜೊತೆಗೆ ಅನ್ನಪೂರ್ಣ ಅಡುಗೆ ಮನೆಯನ್ನು ವೀಕ್ಷಿಸಿ, ಸಂಸ್ಥೆಯ ಎಲ್ಲ ಸಿಬ್ಬಂದಿಯೊಂದಿಗೆ ತಮ್ಮ ಜನ್ಮದಿನವನ್ನು ಆಚರಿಸಿಕೊಂಡ ಸಂದರ್ಭ.




ಕು. ನೇಹಾ ಕೂರ್ಸೆ




ಕಾವ್ಯ ಜಿ. ರಾವ್

'ಅನಂತನಮನ-64' ಸಮಾರಂಭದಲ್ಲಿ ನಡೆದ 'A-CHAT' ಕಾರ್ಯಕ್ರಮದಲ್ಲಿ ಶ್ರೀಮತಿ ಕಾವ್ಯ ಜಿ. ರಾವ್ ಹಾಗೂ ತಂಡದವರಿಂದ ಭರತನಾಟ್ಯ ಮತ್ತು ಕು. ನೇಹಾ ಕೂರ್ಸೆ ಅವರಿಂದ ಭರತನಾಟ್ಯ ಹಾಗೂ ಯೋಗ ನೃತ್ಯ ಪ್ರದರ್ಶನ.

## ಅನಂತ ಚಿತ್ರಸಂಪುಟ

**ಕೇಂದ್ರ ಹಾಗೂ ರಾಜ್ಯದ ನಾಯಕರೊಂದಿಗೆ ರಾಜಕೀಯವಾಗಿ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡಿದ್ದ ಶ್ರೀ ಅನಂತಕುಮಾರರು, 'ದೇಶ ಮೊದಲು, ಪಕ್ಷ ನಂತರ, ವ್ಯಕ್ತಿ ಕೊನೆಗೆ' ಎಂಬ ತತ್ವದೊಂದಿಗೆ ಬದುಕಿ, ಬಾಳಿದ ಮಾದರಿ ವ್ಯಕ್ತಿತ್ವ.**















